ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ಪ್ರೀತಿ ನಮ್ಮ ಸ್ವಭಾವ.
- ಮೌನ ನಮ್ಮ ಭಾಷೆ.
- ಧ್ಯಾನ ನಮ್ಮ ಮಾರ್ಗ.
- ಈ ಪ್ರಪಂಚ ನಮ್ಮ ಆಶ್ರಮ.
- ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 9 ಸಂ. 7 ಜುಲೈ 2012 ರೂ.25

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ
ಅನು: ಶ್ಯಾಮಲಾದೇವಿ

ಈ ಆಷಾಢ ಮಾಸದಲ್ಲಿ, ಮಹಾನ್ ಚೈತನ್ಯಗಳು ಅತ್ಯುನ್ನತ ಮೂಲದಿಂದ ನೇರವಾಗಿ ಭೂಮಿಗೆ ಬರುತ್ತವೆ. ಪುರಾತನ ಋಷಿಗಳಿಗೆ ಇದರ ಅರಿವಿತ್ತು. ಇತರರಿಗೆ, ಭೌತಿಕ ಚಟುವಟಿಕೆಗಳಿಗಿಂತ ಆಧ್ಯಾತ್ಮೀಕರಣದಲ್ಲಿ ಹೆಚ್ಚು ಸಮಯ ಕಳೆಯಲು ಅವರು ಸಲಹೆ ನೀಡುತ್ತಿದ್ದರು. ಅದಕ್ಕಾಗಿ ಜನರು ಮದುವೆ, ಸಾಂಪ್ರದಾಯಿಕ ಆಚರಣೆಗಳು, ಮತ್ತು ಇತರ ಎಲ್ಲ ಪ್ರಧಾನ ಭೌತಿಕ ಚಟುವಟಿಕೆಗಳನ್ನು ಮುಂದೂಡಿ, ಧ್ಯಾನಗಳಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದರು. ಆದರೆ, ಕಾಲ ಕಳೆದಂತೆ, ಜನರು ಮುಂದೂಡಿಕೆಗಳ ಹಿಂದಿನ ತತ್ವವನ್ನು ಮರೆತು, ಇಡೀ ಈ ತಿಂಗಳು ಅಶುಭ ಕಾಲ ಎಂಬ ಅಭಿಪ್ರಾಯ ಹೊಂದಿದರು. ಈ ತಿಂಗಳ ಪ್ರತಿಯೊಂದು ಕ್ಷಣವೂ ದಿವ್ಯವಾದುದು ಎಂಬುದನ್ನು ಮರೆತರು. ಆದರೆ, ಈಗ, ನಾವು ಹೊಸ ಯುಗವನ್ನು ಪ್ರವೇಶಿಸುತ್ತಿರುವಂತೆ, ಋಷಿಗಳು ನಾವು ಮರೆತಿರುವ ತತ್ವದ ಬಗ್ಗೆ ನೆನಪು ಮಾಡಿಕೊಡುತ್ತಿದ್ದಾರೆ ಮತ್ತು ಧ್ಯಾನಗಳ ಮುಖಾಂತರ, ಮೂಲದಿಂದ ಚೈತನ್ಯಗಳನ್ನು ಅಂತರ್ಗತ ಮಾಡಿಕೊಳ್ಳುವುದರಲ್ಲಿ ಹೆಚ್ಚು ಸಮಯ ಕಳೆಯಲು ಸಲಹೆ ನೀಡುತ್ತಿದ್ದಾರೆ.

ಅಮರರವರು ನಮಗೆ ಹೇಳಿದರು: ದೇವರೇ ಪರಮ ಗುರು ಮತ್ತು ಮಾನವ ಗುರುಗಳು ಅವನ ಪ್ರತಿನಿಧಿಗಳು ಹಾಗೂ ಅವರು ಅಧ್ಯಾತ್ಮ ಮಾರ್ಗದರ್ಶಿಗಳು. ಅಮರರವರ ದಿವ್ಯಜ್ಞಾನಗಳ ಬಗ್ಗೆ ನಾನು ಮೆಲುಕು ಹಾಕುತ್ತಿದ್ದಂತೆಯೇ, ಮಾನವ ಗುರುವಿನ ಪಾತ್ರದ ಬಗೆಗಿನ ಅವರ ವ್ಯಾಖ್ಯೆಯನ್ನು ನಾನು ನೆನಪಿಸಿಕೊಂಡೆ. ಅದು, ಮುಖ್ಯವಾಗಿ, ಸಾಧಕರನ್ನು ನಿಜವಾದ ಗುರುವಿನೊಂದಿಗೆ, ದೇವರೊಂದಿಗೆ ಸಂಪರ್ಕಿಸುವುದು. ಇದನ್ನು ಸಾಧಕರಿಗೆ ಮನಗಾಣಿಸುವುದು ಮತ್ತು ಅವರನ್ನು ನಿಜವಾದ ಗುರುವಿನತ್ತ ಕರೆದೊಯ್ಯುವುದು. ಸಾಧಕ ದೇವರನ್ನು ಅನುಭವಿಸಲು ನೆರವು ನೀಡುವುದು. ದೇವರತ್ತ ನಡೆಸಲು ಬೇಕಾಗುವ ಜ್ಞಾನ, ಚೈತನ್ಯಗಳು ಮತ್ತು ತಂತ್ರಗಳನ್ನು ಒದಗಿಸುವುದು ಅವನ ಕೆಲಸ. ಮತ್ತು ಒಂದು ಬಹುಮುಖ್ಯ ವಿಷಯವೆಂದರೆ, ಒಮ್ಮೆ ಸಾಧಕ ನಿಜವಾದ ಗುರುವನ್ನು ಸಂಪರ್ಕಿಸಿದನೆಂದರೆ, ಮಾನವ ಗುರುವಿನ ಕೆಲಸ ಮುಗಿಯಿತು ಏಕೆಂದರೆ ಆ ಸ್ಥಿತಿಯಿಂದ ನಿಜವಾದ ಗುರು ನೇರವಾಗಿ ಸಾಧಕನನ್ನು ಮಾರ್ಗದರ್ಶಿಸುತ್ತಾನೆ ಮತ್ತು ಅವನನ್ನು ಅಂತಿಮ ಸ್ವಾತಂತ್ರ್ಯ ಮತ್ತು ಶರಣಾಗತಿಗೆ; ಮುಕ್ತಿಗೆ ಕರೆದೊಯ್ಯುತ್ತಾನೆ!

ನಾನು ಅಮರರವರ ಮಾತುಗಳನ್ನು ನೆನಪಿಸಿಕೊಂಡೆ: ಸಾಧಕನನ್ನು ಹತೋಟಿಯಲ್ಲಿಟ್ಟುವುದು ಮತ್ತು ಅವನ ಜೀವನದ ಪ್ರತಿಯೊಂದು ವಿವರದಲ್ಲೂ ಸೂಚನೆ ಕೊಡುವುದು ಒಬ್ಬ ಗುರುವಿನ ಕೆಲಸವಲ್ಲ. ಅವನ ಕೆಲಸ, ಸಾಧಕ ಯೋಚಿಸಿ, ಸ್ವತಂತ್ರವಾಗಿ ಕಾರ್ಯನಿರತನಾಗುವಂತೆ ಮಾಡುವುದು. ಅವನ ಕೆಲಸ ಸಾಧಕನನ್ನು ಶಕ್ತಿಯುತ ಮತ್ತು ಪರಿಶುದ್ಧನನ್ನಾಗಿ ಮಾಡುವುದು. ಸಾಧಕನನ್ನು ನಿಯಂತ್ರಿಸಿದರೆ, ಅವನು ಗುರುವಿನ ಮಾತುಗಳನ್ನೇ ಅವಲಂಬಿಸುತ್ತಾನೆ ಮತ್ತು ಎಂದೂ ಮುನ್ನಡೆಯುವುದಿಲ್ಲ. ಅವನು ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಹಸ ಮಾಡುವುದಿಲ್ಲ. ಆಧ್ಯಾತ್ಮಿಕ ಪ್ರಯಾಣದಲ್ಲಿ ಅಂತಿಮ ಗುರಿಯಾದ ಸ್ವಾತಂತ್ರ್ಯವನ್ನು ಗಳಿಸುವುದರಲ್ಲಿ ಅವನು ವಿಫಲನಾಗದಿರಬಹುದು ಆದರೆ ಅವನೆಂದೂ ಸಫಲನಾಗುವುದಿಲ್ಲ. ಸ್ವಾತಂತ್ರ್ಯವಿಲ್ಲದ ವ್ಯಕ್ತಿ ಶರಣಾಗಲಾರ, ಮುಕ್ತಿಯನ್ನು ಪಡೆಯಲಾರ. ಸ್ವಾತಂತ್ರ್ಯ ಮತ್ತು ಇಚ್ಛಾಸ್ವಾತಂತ್ರ್ಯದ ಯಥೋಚಿತ ಬಳಕೆ ದೈನಂದಿನ ಜೀವನದಲ್ಲಿ ಸಹ ಬಹಳ ಮುಖ್ಯ. ಹೆಳವ ಎಂದೂ ನಡೆಯಲಾರ.

ಗುರುಗಳಿಗೆ ತಮ್ಮ ಪಾತ್ರಗಳನ್ನು ಅರ್ಥಮಾಡಿಕೊಳ್ಳುವ ಮತ್ತು ತಮ್ಮ ಸಾಧಕರು ನಡೆಯಲು ಮತ್ತು ಹಾಯ್ದುಹೋಗಲು ನೆರವಾಗುವ ಕಾಲ ಬಂದಿದೆ ಎನ್ನುವುದು ನನ್ನ ಅನಿಸಿಕೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ತಪೋನಗರ ನಿವಾಸಿಗಳು ಗುರೂಜಿಯವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲು ಮೇ 17ರ ಮಧ್ಯರಾತ್ರಿ ಸೇರಿದ್ದರು.

## ಸುದ್ದಿ-ಸೂಚನೆ

- 3-7-2012 ರಂದು ಮಧ್ಯಾಹ್ನ 12 ಘಂಟೆಗೆ ಗುರುಪೂರ್ಣಿಮೆಯ ಪ್ರಯುಕ್ತ ವಿಶೇಷ ಧ್ಯಾನವನ್ನು ತಪೋನಗರದಲ್ಲಿ ಆಯೋಜಿಸಲಾಗಿದೆ.
- 4-6-2012ರಂದು ತಪೋನಗರದಲ್ಲಿ ಆಯೋಜಿಸಲಾಗಿದ್ದ ಚಂದ್ರಗ್ರಹಣದ ವಿಶೇಷ ಧ್ಯಾನದಲ್ಲಿ 100ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.
- ಗುರೂಜಿಯವರ ಹುಟ್ಟುಹಬ್ಬ ಕಾರ್ಯಕ್ರಮದ ಸಂದರ್ಭದಲ್ಲಿ, 19-5-2012ರಂದು ಆನೇಕಲ್‌ನಲ್ಲಿ 150ಕ್ಕೂ ಹೆಚ್ಚು ಜನರು ಮತ್ತು 20-5-2012ರಂದು ತಪೋನಗರದಲ್ಲಿ 400ಕ್ಕೂ ಹೆಚ್ಚು ಜನರು ಸೇರಿದ್ದರು.
- ನಮ್ಮ ಎಲ್ಲಾ ಸಾಧಕರು ವಾರ್ತಾಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು. ವಾರ್ತಾಪತ್ರದ ನವೀಕರಣವನ್ನು ನಿಗದಿತ ಸಮಯದ ಒಳಗೆ ಮಾಡಿಕೊಳ್ಳಬೇಕಾಗಿ ವಿನಂತಿ.
- ದೂರಕಲಿಕೆಯ ಸಾಧಕರು ತಮ್ಮ ಸಾಧನೆಯಲ್ಲಿ ಅಂತರವನ್ನು ತಪ್ಪಿಸಲು ಅದರ ರಿಜಿಸ್ಟ್ರೇಶನ್ ನವೀಕರಣ ಪತ್ರ ತಲುಪಿದ ಕೂಡಲೇ ನವೀಕರಿಸಿಕೊಳ್ಳಬೇಕು.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 03 | ಮಂಗಳ | ಗುರು ಪೂರ್ಣಿಮಾ |
| 11 | ಬುಧ | ಕೃಷ್ಣಾಷ್ಟಮಿ |
| 16 | ಸೋಮ | ದಕ್ಷಿಣಾಯನ ಆರಂಭ |
| 17 | ಮಂಗಳ | ಮಾಸ ಶಿವರಾತ್ರಿ |
| 19 | ಗುರು | ಅಮಾವಾಸ್ಯೆ |
| 26 | ಗುರು | ಶುಕ್ಲ ಅಷ್ಟಮಿ |
| 27 | ಶುಕ್ರ | ವರಮಹಾಲಕ್ಷ್ಮೀ ಪೂಜೆ |
| 28 | ಶನಿ | ಶುಕ್ಲ ದಶಮಿ |

## ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11-12<br>ವಿಶೇಷ ಧ್ಯಾನ ಮತ್ತು ಲೈಟ್ ಚಾನಲಿಂಗ್: ಮಧ್ಯಾಹ್ನ 12-1 |
| 03-07-12 | ಗುರುಪೂರ್ಣಿಮಾ ವಿಶೇಷ ಧ್ಯಾನ : ಮಧ್ಯಾಹ್ನ 12-1 |
| 08-07-12 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 15-07-12 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 29-07-12 | ಅಖಂಡ ಧ್ಯಾನ : ಬೆಳಿಗ್ಗೆ 11- ಮಧ್ಯಾಹ್ನ 1 |

14-7-2012 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.

ಈಗ www.lightagemasters.com ವೆಬ್‌ಸೈಟ್ ಮೂಲಕ ಹೊರದೇಶಗಳಲ್ಲಿ ವಾಸಿಸುವ ನಮ್ಮ ಸಾಧಕರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಆನ್‌ಲೈನ್‌ನಲ್ಲಿ ಹಣ ಕಳುಹಿಸುವ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಈಗ ಗುರೂಜಿಯವರು 'Speaking Tree' ಯ ಮಾಸ್ಟರ್‌ಗಳ ಸಾಲಿಗೆ ಸೇರ್ಪಡೆಯಾಗಿದ್ದಾರೆ. ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇಮೇಲ್ ಮುಖಾಂತರ ಸಂಪರ್ಕಿಸಬಹುದು.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- ಕ್ರಮಬದ್ಧವಾಗಿ ಲೈಟ್ ಚಾನಲಿಂಗ್ ಸೆಷನ್ ನಡೆಸುತ್ತಿರುವ ಶಾಲೆಗಳಲ್ಲಿ ಶಾಲಾ ಫಲಿತಾಂಶಗಳು ಉತ್ತಮಗೊಂಡಿವೆ ಎಂದು ತಿಳಿಸಿದ್ದಾರೆ. ಅನೇಕ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಬೆಳಕಿನಿಂದ ಚಿಕ್ಕ ಮತ್ತು ದೊಡ್ಡ ಹಾಗೂ ಪವಾಡಸದೃಶವಾದ ಸಹಾಯಗಳನ್ನು ಪಡೆದ ಘಟನೆಗಳನ್ನು ತಿಳಿಸಿದ್ದಾರೆ. ಜನರು ಹೆಚ್ಚು ಹೆಚ್ಚು ಬೆಳಕನ್ನು ಉಪಯೋಗಿಸಿಕೊಂಡು, ಅದರ ಅನುಗ್ರಹವನ್ನು ಪಡೆಯುತ್ತಿದ್ದಾರೆ.
- ಬೇಸಿಗೆ ರಜೆಯ ನಂತರ ಶಾಲೆಗಳು ಆರಂಭವಾದಂತೆ, ನಮ್ಮ ಕಾರ್ಯಕರ್ತರು ಹೊಸದಾಗಿ ಸಾವಿರಾರು ಮಕ್ಕಳಿಗೆ ಲೈಟ್ ಚಾನಲಿಂಗ್ ಪರಿಚಯಿಸುವ ಮೂಲಕ, ಲೈಟ್ ಚಾನಲಿಂಗ್ ಕಾರ್ಯಕ್ರಮವು ತನ್ನ ವೇಗವನ್ನು ಪಡೆದುಕೊಳ್ಳುತ್ತಿದೆ. ■

## ಲೈಟ್ ಚಾನಲಿಂಗ್ ಅನುಭವಗಳು

ಜೂನ್ 2011ರಿಂದ ನಾನು ಬೆನ್ನುನೋವಿನಿಂದ ನರಳುತ್ತಿದ್ದೆ. ಲೈಟ್ ಚಾನಲಿಂಗ್ ಮಾಡಲಾರಂಭಿಸಿದ ನಂತರ, ಆ ನೋವು ನಿವಾರಣೆಯಾಯಿತು.

– ಅವಿನಾಶ್ ಕುಮಾರ್, 4ನೇ ವರ್ಷದ ವಿದ್ಯಾರ್ಥಿ, ಅಗ್ರಿಕಲ್ಚರಲ್ ಕಾಲೇಜ್, ಮಧುರೈ

22–11–2011ರಂದು ನಾನು ಶಾಲಾಮಕ್ಕಳೊಂದಿಗೆ ಕನ್ಯಾಕುಮಾರಿಗೆ ಪ್ರವಾಸಕ್ಕೆ ಹೋಗಿದ್ದೆ. ನಾವು ಅಲ್ಲಿಗೆ ಬೆಳಿಗ್ಗೆ 11.30ಕ್ಕೆ ತಲುಪಿದೆವು. ಆಗ ವಿವೇಕಾನಂದ ಮಂದಿರವಿರುವ ಬಂಡೆಗೆ ಹೋಗುವ ದೋಣಿಯು ಹವಾಮಾನ ವೈಪರೀತ್ಯದಿಂದಾಗಿ ಮುಚ್ಚಿತ್ತು. ನಂತರ ಪಾರ್ಕ್ ಒಂದರಲ್ಲಿ ಕುಳಿತು ಊಟ ಮಾಡಿದೆವು. ಊಟದ ನಂತರ ಪ್ರೈಮರಿ ಶಾಲೆಯ ಕೆಲವು ಮಕ್ಕಳು ಲೈಟ್ ಚಾನಲ್ ಮಾಡಿ, ಆ ಮಂದಿರಕ್ಕೆ ಹೋಗಲು ಸಹಾಯ ನೀಡುವಂತೆ ಬೆಳಕನ್ನು ಪ್ರಾರ್ಥಿಸಿದರು.

ಸಂಜೆ 4 ಘಂಟೆಯ ಸಮಯದಲ್ಲಿ ನಾವೆಲ್ಲ ಹೊರಡಲು ಅನುವಾದಾಗ, ವಿದ್ಯಾರ್ಥಿಗಳು ಗೈಡ್ ಮತ್ತು ಅಧ್ಯಾಪಕರನ್ನು ಇನ್ನೊಮ್ಮೆ ಪ್ರಯತ್ನಿಸಲು ಕೇಳಿಕೊಂಡರು. ಅದು ದೂರದಲ್ಲಿದ್ದರೂ, ಅವರು ಒಪ್ಪಿದರು ಮತ್ತು ದೋಣಿ ಸೇವೆಯು ಪುನಃ ಆರಂಭವಾದ ಸಂದೇಶವನ್ನು ಕೂಡಲೇ ಕಳುಹಿಸಿದರು. ಆತುರಾತುರವಾಗಿ ಅಲ್ಲಿ ಹೋದಾಗ, ಮುಚ್ಚಿದ ಗೇಟಿನ ಮುಂದೆ ದೊಡ್ಡ ಗುಂಪು ಇದ್ದುದನ್ನು ನೋಡಿದೆವು. ಆಗ, ನಮ್ಮ ಗೈಡ್ ಆ ಆಫೀಸಿನ ಮುಖ್ಯಸ್ಥನಿಂದ ವಿಶೇಷ ಅನುಮತಿಯೊಂದಿಗೆ ಟಿಕೆಟ್‌ಗಳನ್ನು ತಂದರು! ಕೊನೆಯ ದೋಣಿಯಲ್ಲಿ ನಾವು ಕುಳಿತೆವು. ನಾವು ಅಲ್ಲಿ ಧ್ಯಾನ ಮಾಡಿ, ಶುಭ್ರವಾದ ಆಕಾಶದಲ್ಲಿ ಸೂರ್ಯಾಸ್ತವನ್ನು ವೀಕ್ಷಿಸಿದೆವು. ಆ ಬಂಡೆಯು ದೀಪಗಳ ಬೆಳಕಿನಲ್ಲಿ ಹೊಳೆಯಲು ಆರಂಭಿಸಿದಾಗ, ಅದ್ಭುತವಾದ ಚೈತನ್ಯಗಳ ಅನುಭವವನ್ನು ನಮ್ಮ ಮನದಲ್ಲಿ ಹೊತ್ತು ಅಲ್ಲಿಂದ ಹೊರಟೆವು.

– ಶ್ರೀಮತಿ ಉಮಾ ಕೃಷ್ಣಮೂರ್ತಿ, ಮುಖ್ಯೋಪಾಧ್ಯಾಯಿನಿ, ಜ್ಞಾನಬೋಧಿನಿ ಶಾಲೆ, ಶೇಷಾದ್ರಿಪುರಂ, ಬೆಂಗಳೂರು

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ಪಾಂಡುರಂಗ**

ಬುದ್ಧಪೂರ್ಣಿಮಾ, ಲೈಟ್ ಚಾನಲಿಂಗ್ ಸಮಾವೇಶ, ಗುರೂಜಿಯವರ ಹುಟ್ಟುಹಬ್ಬದ ಆಚರಣೆ ಮತ್ತು ಸೂರ್ಯಗ್ರಹಣಗಳನ್ನೊಳಗೊಂಡ ಮೇ ತಿಂಗಳು ಚೈತನ್ಯಗಳಿಂದ ಹಾಗೂ ಆಶೀರ್ವಾದಗಳಿಂದ ಕೂಡಿತ್ತು. ಸಮಾವೇಶದ ಪೂರ್ವಸಿದ್ಧತೆಯು ಭರದಿಂದ ಸಾಗಿತ್ತು; ಇದಾದ ನಂತರ ಗುರೂಜಿಯವರ ಹುಟ್ಟುಹಬ್ಬದಂದು ಬಿಡುಗಡೆಯಾಗಲಿದ್ದ ಪುಸ್ತಕಗಳ ಕೆಲಸ ತನ್ನ ವೇಗವನ್ನು ಹೆಚ್ಚಿಸಿಕೊಂಡಿತು.

ಗುರೂಜಿಯವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ 400ಕ್ಕೂ ಹೆಚ್ಚುಜನರು ಭಾಗವಹಿಸಿದ್ದರು. ಈ ಕಾರ್ಯಕ್ರಮವು ಪೂರ್ವಯೋಜನೆಯಂತೆಯೆ ಸುಂದರವಾಗಿ ನಡೆಯಿತು. ತಪೋನಗರವು ಸಡಗರದ ವಾತಾವರಣದಿಂದ ಕಂಗೊಳಿಸುತ್ತಿತ್ತು. ತಪೋನಗರ ನಿವಾಸಿಗಳು ಮೇ 17ರ ಮಧ್ಯರಾತ್ರಿಯಲ್ಲಿ ಸೇರಿ, ಗುರೂಜಿಯವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಪ್ರತಿ ನಿವಾಸಿಯೂ ಗುರೂಜಿಯವರಿಗೆ ತಮ್ಮ ಪ್ರೀತಿ ಮತ್ತು ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು. ಕೆಲವರು ಮಾತನಾಡದೇ ಇದ್ದರೂ, ಮೌನದಲ್ಲೇ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದುದು ಕಂಡುಬರುತ್ತಿತ್ತು. ಇದು ಅತ್ಯಂತ ಹೃದಯಸ್ಪರ್ಶಿಯಾಗಿತ್ತು. ಮೇ ತಿಂಗಳಲ್ಲಿ ಹುಟ್ಟುಹಬ್ಬವಿದ್ದ ಇತರ ಅದೃಷ್ಟವಂತ ನಿವಾಸಿಗಳೊಂದಿಗೆ ಗುರೂಜಿಯವರು ಕೇಕ್ ಕತ್ತರಿಸಿದರು. ಈ ಸಂದರ್ಭದಲ್ಲಿ ನಿವಾಸಿಗಳು ಗುರೂಜಿಯವರಿಗೆ ಉಡುಗೊರೆ ಮತ್ತು ಹೂಗುಚ್ಛಗಳನ್ನು ನೀಡಿದರು.

ಸೂರ್ಯಗ್ರಹಣ, ತಪೋನಗರ ನಿವಾಸಿಗಳೆಲ್ಲರನ್ನೂ ಒಟ್ಟಾಗಿ ಸೇರಿಸಿತು; 6 ಗಂಟೆಗಳ ಕಾಲ ಇಡೀ ಪ್ರಪಂಚಕ್ಕೆ ಎಲ್ಲರೂ ಲೈಟ್ ಚಾನಲ್ ಮಾಡಿದರು. ಸಮಯ ಶರವೇಗದಲ್ಲಿ ಓಡಿ, ಅತಿಶೀಘ್ರದಲ್ಲಿಯೇ ನಾವು ತಿಂಗಳ ಕೊನೆಯ ವಾರದ ನಿವಾಸಿಗಳ ಕೂಟದಲ್ಲಿ ಭಾಗವಹಿಸಿದೆವು.

ಆಗಾಗ ಬಂದ ತುಂತುರು ಮಳೆ ತಾಪಮಾನವನ್ನು ಕೆಳತಂದರೂ, ತಪೋವನದಲ್ಲಿ ಇನ್ನೂ ಅನೇಕ ಒಣಗಿದ ಗಿಡಗಳಿವೆ. ಆದರೂ ಪ್ರಶಾಂತತೆಯಿಂದ ಕೂಡಿದ ಅದರ ಸೌಂದರ್ಯ ಒಂದಿನಿತೂ ಕುಗ್ಗಿಲ್ಲ. ಆಂತರ್ಯದ ಆಧ್ಯಾತ್ಮಿಕ ಸೌಂದರ್ಯದ ಮೇಲೆ ಬಾಹ್ಯ ಸೌಂದರ್ಯ ಯಾವ ಪರಿಣಾಮವನ್ನೂ ಬೀರುವುದಿಲ್ಲ, ಎಂಬ ಬಲವಾದ ಸಂದೇಶ ಇದರಲ್ಲಿದೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

### 06–05–2012

ಭ್ರಷ್ಟಾಚಾರ ಎಲ್ಲ ಕಡೆಯೂ ಇದೆ. ಅದು ಪ್ರತಿ ಮಟ್ಟದಲ್ಲಿ, ಯಾವುದೇ ವ್ಯವಸ್ಥೆಯನ್ನು ನೋಡಿದರೂ ಅಲ್ಲಿ ತಾಂಡವವಾಡುತ್ತಿದೆ ಮತ್ತು ನಾವು ಈ ವ್ಯವಸ್ಥೆಗಳ ಭಾಗವಾಗಿದ್ದೇವೆ. ಈಗ ಸಂಪೂರ್ಣವಾಗಿ ಭ್ರಷ್ಟತೆಯ ಎಲ್ಲ ವ್ಯವಸ್ಥೆಗಳನ್ನು ಮತ್ತು ಎಲ್ಲ ರೀತಿಯ ಅಪೂರ್ಣತೆಗಳನ್ನು ಶುಚಿಗೊಳಿಸುವಂಥ ಒಂದು ಕ್ರಾಂತಿಯಾಗಬೇಕಾಗಿದೆ. ನಾವು ಭಾಗವಹಿಸಲಿ ಅಥವಾ ಬಿಡಲಿ ಕ್ರಾಂತಿ ಸಂಭವಿಸುತ್ತದೆ. ಅದು ಬೃಹತ್ ಕ್ರಾಂತಿ ಮತ್ತು ಕೊನೆಯ ಕ್ರಾಂತಿ. ವ್ಯವಸ್ಥೆಗಳು ಬದಲಾಗದಿದ್ದರೆ, ಜನರು ಬದಲಾಗದಿದ್ದರೆ ಭಾರಿ ಕುಸಿತಗಳು ಉಂಟಾಗುತ್ತವೆ.

ಅನೇಕ ಜಾಗೃತಿಗಳುಂಟಾಗಿವೆ. ನಾನು ಗಮನಿಸಿದ ಒಂದು ದೊಡ್ಡ ಜಾಗೃತಿಯೆಂದರೆ ಬರ್ಮಾ ದೇಶದ ಆಂಗ್ ಸಾನ್ ಸ್ಯೂಚಿಯವರಲ್ಲಿ ಉಂಟಾದುದು; ಆಕೆ ತನ್ನ ಆದರ್ಶಗಳನ್ನು ಬಲಿಕೊಟ್ಟರು. ಬಹುಶಃ ಅವರು ಜನರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಮಾಣವಚನವನ್ನು ಆರಿಸಿಕೊಂಡರು. ಆಕೆ ಪ್ರಮಾಣವಚನ ಸ್ವೀಕರಿಸದೆ ಹೋಗಿದ್ದರೆ, ಹೇರಲಾಗಿದ್ದ ನಿರ್ಬಂಧಗಳನ್ನು ತೆಗೆದು ಹಾಕುತ್ತಿರಲಿಲ್ಲ. ಇದು ಅತ್ಯಂತ ಪ್ರಶಂಸನೀಯ ಕೆಲಸ. ನಾವು ಮೆಚ್ಚುವ ಇಂಥ ಅನೇಕ ಜನರಿದ್ದಾರೆ. ನಾವು ಅವರಂತೆ ಜೀವಿಸಲು ಪ್ರಾರಂಭಿಸಬೇಕು. ನಾವು ಧ್ಯಾನಿಗಳು, ಕ್ರಾಂತಿ ತರಬಯಸುವವರು ಇಂಥ ವಿಷಯವನ್ನು ಅರಿಯಬೇಕು. ಕ್ರಾಂತಿ ನಮ್ಮಿಂದ ಪ್ರಾರಂಭವಾಗಬೇಕು, ಇಲ್ಲವಾದರೆ ಅದು ಸಂಭವಿಸದು. ಬಹುಶಃ ಆಗ ನಾವು ಕುಸಿಯುತ್ತೇವೆ.

'ಗುರು ಸಂಗಮಮ್' ಮತ್ತು ಇಂತಹ ಗ್ರೂಪ್‌ಗಳು ಸೂಕ್ತ ಕಾರ್ಯಸೂಚಿ, ಸರ್ವಸಮ್ಮತ ಕಾರ್ಯಕ್ರಮಗಳಿಂದ ಕೂಡಿಬರಲಿ. ಪ್ರಪಂಚದ ಆಧ್ಯಾತ್ಮಿಕ ಮುಖಂಡರೆಲ್ಲ ಒಂದಾಗಿ ಒಂದು ಸಾಮಾನ್ಯ ಮೌಲ್ಯಾಧಾರಿತ ವ್ಯವಸ್ಥೆಯನ್ನು ಹೊರತರಲಿ. ಇದು ಎಲ್ಲರೂ ಅನುಸರಿಸುವಂತಿದ್ದು, ಕಾಲಕ್ರಮದಲ್ಲಿ ಅದು ಎಲ್ಲ ಧರ್ಮಗಳ ಸ್ಥಾನವನ್ನು ತುಂಬಲಿ. ನಾನು ಋಷಿಗಳೊಡನೆ ಕೆಲಸ ಮಾಡುವ ವ್ಯಕ್ತಿ. ನಮಗೆ ನಮ್ಮದೇ ಗುರಿಗಳಿವೆ. ನಮಗೆ ನಮ್ಮದೇ ಕನಸುಗಳಿವೆ. ಹೆಚ್ಚು ಹೆಚ್ಚು ಜನರು ನಮ್ಮೊಡನೆ ಸೇರಲಿ ಎಂದು ನಾನು ಬಯಸುತ್ತೇನೆ. ನೀವೆಲ್ಲರೂ ಇವುಗಳನ್ನು ಗಮನಿಸಬೇಕೆಂದು ನಾನು ಬಯಸುತ್ತೇನೆ.

'ದೇವರು' ಪದವನ್ನು ಬಳಸಲು ನಾನು ಹಿಂಜರಿಯುವುದಿಲ್ಲ, ಏಕೆಂದರೆ ನನಗೆ ದೇವರು ವಾಸ್ತವ. ಆಧ್ಯಾತ್ಮಿಕತೆಯ ಹೆಸರಿನಲ್ಲಿ ಅನೇಕ ವಿಷಯಗಳು ಸಂಭವಿಸುತ್ತಿವೆ. ಅಲ್ಲಿ ಹೆಚ್ಚಿನ ವಾಣಿಜ್ಯೀಕರಣವಿದೆ. ಹೀಗಾಗಿ ನಾನು 'ಹೊಸಯುಗದ ಆಧ್ಯಾತ್ಮಿಕತೆ' ಎಂದು ಕರೆಯುತ್ತೇನೆ. ನಾವು ಋಷಿಗಳಿಂದ ಜ್ಞಾನವನ್ನು ರವಾನಿಸಲು ಇಲ್ಲಿದ್ದೇವೆ ಮತ್ತು ಇಡೀ ಮನುಕುಲ 2012ನ್ನು ದಾಟಲು ಸಹಾಯಮಾಡುವುದಕ್ಕಾಗಿ ಇಲ್ಲಿದ್ದೇವೆ. ಋಷಿಗಳು ಮಹಾಗುರುಗಳು. ಅವರು ಬೆಳಕಿನ ಕಾರ್ಯಕರ್ತರಲ್ಲ, ಋಷಿಗಳಿಗೆ ಮತ್ತು ಬೆಳಕಿನ ಕಾರ್ಯಕರ್ತರಿಗೆ ಅಗಾಧ ವ್ಯತ್ಯಾಸವಿದೆ.

### 13–05–2012

ಮೇ 6ರ ರಾತ್ರಿ, ಬುದ್ಧಪೂರ್ಣಿಮೆಯ ದಿನ ಬುದ್ಧನು ಹೊಸ ಚೈತನ್ಯಗಳನ್ನು ಈ ಭೂಮಿಗೆ ತಂದನು. ಅದನ್ನು ಮೇ 7ರಂದು ನಾವು ಆಯೋಜಿಸಿದ ಸಮಾವೇಶದಲ್ಲಿ ಸಾವಿರಾರು ಜನ ಚಾನಲ್ ಮಾಡಿದರು. ಈ ಚೈತನ್ಯಗಳನ್ನು ಮತ್ತೆಮತ್ತೆ ಚಾನಲ್ ಮಾಡಲಾಗುತ್ತಿದೆ. ಈ ಚೈತನ್ಯಗಳು ನಮಗೆ ಅನೇಕ ರೀತಿಯಲ್ಲಿ ಸಹಾಯ ಮಾಡುತ್ತವೆ. ಅವು ವ್ಯಕ್ತಿಗಳಲ್ಲಿ ಪ್ರಳಯದ ಪ್ರಕ್ರಿಯೆಗಳನ್ನು ಶೀಘ್ರಗೊಳಿಸುತ್ತವೆ ಮತ್ತು ಅವರು ತಮ್ಮನ್ನು ಸಿದ್ಧಪಡಿಸಿಕೊಳ್ಳಲು, ಪರಿವರ್ತಿತರಾಗಲು ಸಹಾಯ ಮಾಡುತ್ತವೆ. ಅವು ನಮಗೆ ಮೊದಲು ವೈಯಕ್ತಿಕ ಮಟ್ಟದಲ್ಲಿ ಸಹಾಯ ಮಾಡುತ್ತವೆ, ಏಕೆಂದರೆ ಬೆಳಕಿನಿಂದ ಕ್ರಾಂತಿ ವೈಯಕ್ತಿಕ ಮಟ್ಟದಲ್ಲಿ ಪ್ರಾರಂಭವಾಗುತ್ತದೆ. ವ್ಯಕ್ತಿಗಳು ಬದಲಾವಣೆಯಾದರೆ, ವ್ಯವಸ್ಥೆಗಳು ವ್ಯಕ್ತಿಗಳಾಗಿರುವುದರಿಂದ ಅವು ಕೂಡಾ ಬದಲಾವಣೆಯಾಗುತ್ತವೆ. ಉನ್ನತ ಹಂತಕ್ಕೆ ನಾವು ಜಾಗ್ರತರಾಗಬೇಕಾಗಿರುವುದರಿಂದ, ವ್ಯಕ್ತಿಯಲ್ಲಿ ಹೆಚ್ಚು ಜಾಗೃತಿಗಳುಂಟಾಗಲು ಈ ಚೈತನ್ಯಗಳು ಸಹಾಯಮಾಡುತ್ತವೆ. ಅವು ನಮ್ಮ ಒಳ್ಳೆಯ ಅಥವಾ ಕೆಟ್ಟ ಕರ್ಮಗಳ ಫಲಿತಾಂಶಗಳನ್ನು ಬೇಗ ತರುತ್ತವೆ. ವಿಶ್ವದ ಮುಖಂಡರು ಪ್ರಪಂಚದಲ್ಲಿ ಬದಲಾವಣೆ ತರುವವರಾದುದರಿಂದ ಈ ಚೈತನ್ಯಗಳನ್ನು ಋಷಿಗಳು ಅವರಿಗೆ ನೀಡುತ್ತಿದ್ದಾರೆ. ಈ ಚೈತನ್ಯಗಳು ಹೆಚ್ಚು ಹೀಲಿಂಗ್ ಶಕ್ತಿಯನ್ನು ಹೊಂದಿವೆ. ನೀವು ಪ್ರಜ್ಞಾಪೂರ್ವಕವಾಗಿ ಈ ಚೈತನ್ಯಗಳ ಬಗ್ಗೆ ಯೋಚಿಸಿ, ನಿಮಗೆ ಅಥವಾ ನಿಮ್ಮ ಸ್ನೇಹಿತರಿಗೆ ಹೀಲ್ ಮಾಡಲು ಪ್ರಾರ್ಥಿಸಬಹುದು. ಈ ಚೈತನ್ಯಗಳು ಆಧ್ಯಾತ್ಮಿಕತೆಯನ್ನು ಆರಿಸಿಕೊಳ್ಳಲು ನಮಗೆ ಸಹಾಯ ಮಾಡುತ್ತವೆ. ಆಧ್ಯಾತ್ಮಿಕತೆ ಎನ್ನುವುದು ಒಳ್ಳೆಯವರಾಗಿರುವುದು, ಪ್ರಾಮಾಣಿಕ, ಸರಳ ಮತ್ತು ಶಾಂತಿಯುತರಾಗಿರುವುದು. ಧ್ಯಾನಾಭ್ಯಾಸವಿಲ್ಲದಿದ್ದರೂ ಒಬ್ಬ ವ್ಯಕ್ತಿ ಒಳ್ಳೆಯವನಾಗಿರಬಹುದು. ಧ್ಯಾನಗಳು ಅವನಿಗೆ ಅಗತ್ಯವಿಲ್ಲ. ನೀವು ಆಧ್ಯಾತ್ಮಿಕರಾಗಬೇಕೆಂದು ಬಯಸಿದರೆ, ನೀವು ಹೊಸಯುಗವನ್ನು ಆಯ್ಕೆ ಮಾಡುವಿರಿ ಮತ್ತು ಯಾರನ್ನೂ ನೋಯಿಸುವುದಿಲ್ಲ. ನಿಮ್ಮ ನಡತೆಯನ್ನು ಪರೀಕ್ಷಿಸಿಕೊಳ್ಳಿ. ಆರಿಸಿಕೊಳ್ಳುವುದು ಕೇವಲ ಒಂದು ಸಲದ ಪ್ರಕ್ರಿಯೆಯಲ್ಲ. ನೀವು ಆರಿಸಲೇಬೇಕು ಮತ್ತು ಅದಕ್ಕೆ ಬದ್ಧರಾಗಿರಬೇಕು. ಈ ಚೈತನ್ಯಗಳು ನಮಗೆ ಆರಿಸಿಕೊಳ್ಳಲು ಮತ್ತು ಅದಕ್ಕೆ ಬದ್ಧರಾಗಿರಲು ಸಹಾಯ ಮಾಡುತ್ತವೆ.

ಒಬ್ಬ ವ್ಯಕ್ತಿ, ತಪೋನಗರದಲ್ಲಿ ಒಂದು ಗುಂಪು ಸೇರಿ 'ಆತ್ಮದ ಅವರೋಹಣ' ಪುಸ್ತಕದಲ್ಲಿ ಹೇಳಿರುವ ಸೂಕ್ಷ್ಮ ಅಂಶಗಳನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಚರ್ಚಿಸಬೇಕೆಂದು ಸಲಹೆ ನೀಡಿದ್ದಾರೆ. ಇದು ತುಂಬಾ ಒಳ್ಳೆಯ ಯೋಚನೆ. ಆದರೆ ನಾವು ಇದನ್ನು ಮಾಡುವುದಿಲ್ಲ. ಅದು ಸ್ವಲ್ಪ ಮಟ್ಟಿಗೆ ಮಾತ್ರ ಸಹಾಯ ಮಾಡುತ್ತದೆ. ಧ್ಯಾನ ಮಾಡಿ, 'ಆತ್ಮದ ಅವರೋಹಣ'ವನ್ನು ಓದಿ, ಅದರ ಬಗ್ಗೆ ಒಬ್ಬರೇ ಕುಳಿತು ಚಿಂತನೆ ಮಾಡಿ. ನಿಮಗೆ ಅನೇಕ ಅಂತರ್ ಗ್ರಹಿಕೆಗಳು ಉಂಟಾಗುತ್ತವೆ.

### 20–05–2012

ನಿನ್ನೆ ಆನೇಕಲ್‌ನಲ್ಲಿ ಇಂಥದೊಂದು ಕಾರ್ಯಕ್ರಮವನ್ನು ಅತ್ಯಂತ ಸುಂದರವಾಗಿ ಮತ್ತು ಪ್ರೀತಿಯಿಂದ ಆಯೋಜಿಸಿದ್ದರು. ನನ್ನ ಮೇಲೆ ಇಷ್ಟು ಪ್ರೀತಿ ತೋರಿಸಿದ್ದಕ್ಕೆ ಕೃತಜ್ಞತೆ ತಿಳಿಸುವ ಬದಲು, ನಿಮಗೆ ಪ್ರತಿ ರೀತಿಯಲ್ಲೂ ಸಹಾಯ ಮಾಡಲು ನನ್ನ ಜೀವನವನ್ನು ಮುಡಿಪಾಗಿಡುತ್ತೇನೆ.

1998ರಿಂದ ನನ್ನ ಜೀವನದ ಅವಧಿಯನ್ನು ವಿಸ್ತರಿಸಿದುದಕ್ಕಾಗಿ ನಾನು ಋಷಿಗಳಿಗೆ ಕೃತಜ್ಞನಾಗಿದ್ದೇನೆ. 2012ರ ಕೊನೆಗೆ ನುಗ್ಗುತ್ತಿರುವ ಸ್ವಾರಸ್ಯಕರ ಮತ್ತು ಮೈನವಿರೇಳಿಸುವ ಕಾಲದಲ್ಲಿ ಕೆಲಸ ಮಾಡಲು ಅವಕಾಶ ಕೊಟ್ಟಿರುವುದು ನನಗೆ ಅವರು ನೀಡಿರುವ ಒಂದು ದೊಡ್ಡ ಪುರಸ್ಕಾರ.

ಈ ಕೆಲಸವನ್ನು ಕೈಗೊಂಡ ಮೇಲೆ, ನಾನು ಅನೇಕ ಹೃದಯಗಳನ್ನು ಸ್ಪರ್ಶಿಸಿದ್ದೇನೆ ಎಂಬುದರ ಅರಿವು ನನಗಿದೆ. ಕೆಲವರು ಧ್ಯಾನಾಭ್ಯಾಸ ಬಿಟ್ಟಿದ್ದಾರೆ ಅಥವಾ ಬೇರೆ ಮಾರ್ಗಗಳನ್ನು ಹಿಡಿದಿದ್ದಾರೆ. ಅನೇಕರು ನನ್ನ ಸಂಪರ್ಕದಲ್ಲಿದ್ದಾರೆ.

ಮಹರ್ಷಿ ಅಮರರಿಂದ ಮತ್ತು ನಂತರ ಋಷಿಗಳಿಂದ ಪಡೆದ ಜ್ಞಾನವನ್ನು ಹಸ್ತಾಂತರಿಸಲು ಸಾಧ್ಯವಾಗಿದ್ದಕ್ಕೆ ನನಗೆ ಬಹಳ ಸಂತೋಷ ಉಂಟಾಗಿದೆ. ಋಷಿಗಳು ನನಗೆ ಬರೆಯಲು ಸಹಾಯ ಮಾಡುತ್ತಿರುವುದಕ್ಕೆ ನಾನು ಕೃತಜ್ಞ. ನಮ್ಮಲ್ಲಿ ವ್ಯಾಪಕ ಜ್ಞಾನವಿದೆ. ನಮ್ಮ ಎಲ್ಲ ಪುಸ್ತಕಗಳು ಬಹಳ ಸರಳ. ಸತ್ಯವನ್ನು ಅರ್ಥ ಮಾಡಿಕೊಳ್ಳುವುದೇ ಇವುಗಳ ಉದ್ದೇಶ.

ಇಲ್ಲಿರುವ ಪ್ರತಿಯೊಬ್ಬರಿಗೆ, ವೆಬ್‌ಕಾಸ್ಟ್ ನೋಡುತ್ತಿರುವವರಿಗೆ ಮತ್ತು ಈಗ ನಮ್ಮೊಡನೆ ಇಲ್ಲದಿರುವವರಿಗೆ ಋಷಿಗಳನ್ನು ಪರಿಚಯ ಮಾಡಿದುದು ನನಗೆ ಬಹಳ ಸಂತೋಷ ತಂದಿದೆ.

ನೀವು ತಪ್ಪು ಮಾಡಿದಾಗ, ಪ್ರಾಮಾಣಿಕವಾಗಿ ಕ್ಷಮೆ ಕೇಳಿ ಮತ್ತು ಅದನ್ನು ಪುನರಾವರ್ತಿಸಬೇಡಿ. ಅದನ್ನು ಮನ್ನಿಸಲಾಗುತ್ತದೆ. ಈ ನಿಲುವು ಮತ್ತು ತಿಳುವಳಿಕೆ ಋಷಿಗಳಿಂದ ಬಂದಿದೆ. ಜನರು ತಮ್ಮಲ್ಲಿ ಆತ್ಮವಿಶ್ವಾಸವನ್ನು ಕಳೆದುಕೊಂಡಾಗ, ನಾನು ಕನ್ನಡಿಯಂತೆ ಕೆಲಸ ಮಾಡಿ ಅವರಲ್ಲಿ ಆತ್ಮವಿಶ್ವಾಸ ಪುನಶ್ಚೇತನಗೊಳಿಸಿದ್ದಕ್ಕೆ ನನಗೆ ಸಂತೋಷವಿದೆ. ಇಂಥ ಪರಸ್ಪರ ವಿನಿಮಯ ಮತ್ತು ಬೋಧನೆಗಳಿಂದ ನಾನು ಬೆಳೆಯುತ್ತಿದ್ದೇನೆ. ನನ್ನ ಜ್ಞಾನ ಶ್ರೀಮಂತವಾಗುತ್ತಿದೆ ಮತ್ತು ನನ್ನ ವ್ಯಕ್ತಿತ್ವ ಪಕ್ವವಾಗುತ್ತಿದೆ. ನಿಮಗೆಲ್ಲ ಧನ್ಯವಾದಗಳು. ಒಂದು ರೀತಿಯಲ್ಲಿ ನೀವೆಲ್ಲ ನನ್ನ ಗುರುಗಳು!

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ನಾನು ಋಷಿಗಳ ಈ ಕೆಲಸವನ್ನು ಮುಂದುವರೆಸಿಕೊಂಡು ಹೋಗುವ ಒಂದು ವ್ಯವಸ್ಥೆಯನ್ನು ಕಟ್ಟಿದ್ದೇನೆ ಮತ್ತು ಇದನ್ನು ನಾನು ಪ್ರಜ್ಞಾಪೂರ್ವಕವಾಗಿ ಮಾಡಿದ್ದೇನೆ, ಇದು ನನಗೆ ಸಂತೋಷ ತಂದಿದೆ. ಇಷ್ಟಾದರೂ ಮಾಡಲು ನನಗೆ ಸಾಧ್ಯವಾಯಿತಲ್ಲ ಎಂಬುದಕ್ಕೆ ಈ ಕ್ಷಣದಲ್ಲಿ ನನಗೆ ತೃಪ್ತಿಯಿದೆ ಮತ್ತು ಸಂತೋಷವಿದೆ. ಆದರೆ ಇದು ಕೊನೆಯಲ್ಲ, ನಾವು ಮಾಡಬೇಕಾದ ಕೆಲಸ ಇನ್ನೂ ಬಹಳವಿದೆ. ಇದ್ದಕ್ಕಿದ್ದ ಹಾಗೆ ನಾನು ಇಲ್ಲಿ ಇಲ್ಲದೇ ಹೋದರೂ ಈ ಬೆಳಕನ್ನು ಮುಂದೊಯ್ಯಲಾಗುತ್ತದೆ ಎಂಬ ವಿಶ್ವಾಸ ಮತ್ತು ಆಶಾಭಾವನೆ ನನ್ನಲ್ಲಿದೆ.

ಈಗಿನಿಂದ ಋಷಿಗಳ ಕೆಲಸದಲ್ಲಿ ಹೊಸ ಹಂತ ಪ್ರಾರಂಭವಾಗಿದೆ. ನನ್ನ ಜೀವನದಲ್ಲೂ ಹೊಸ ಹಂತ ಪ್ರಾರಂಭವಾಗಿದೆ. ನಾನು ಸೂಕ್ಷ್ಮಮಟ್ಟಗಳಲ್ಲಿ ಹೆಚ್ಚು ಕೆಲಸವನ್ನು ತೆಗೆದುಕೊಳ್ಳಬೇಕಾಗಿದೆ. ಆದರೆ ಈಗ ಮಾಡುತ್ತಿರುವ ಕೆಲಸಗಳನ್ನು ಎಂದಿಗೂ ಕಡೆಗಣಿಸುವುದಿಲ್ಲ. ಇದಕ್ಕಾಗಿ ನಾನು ಕೆಲವು ತ್ಯಾಗಗಳನ್ನು ಮಾಡಲೇಬೇಕು. ನನಗೆ ಸಂಗೀತವೆಂದರೆ ಬಹಳ ಇಷ್ಟ, ಆದರೆ ಇದನ್ನು ಯಾವಾಗ ಕೇಳಿದೆನೋ ನೆನಪಿಲ್ಲ. ನನಗೆ ಕೆಲವು ಬರಹಗಾರರ ಪುಸ್ತಕಗಳನ್ನು ಓದಲು ಇಷ್ಟ, ಆದರೆ ಈ ಜನ್ಮದಲ್ಲಿ ಇದು ಸಾಧ್ಯವಿಲ್ಲ. ಹೊರಗಡೆ ಸುಂದರವಾದ ಆಕಾಶ, ಸೂರ್ಯಾಸ್ತಮ ಮತ್ತು ಹಕ್ಕಿಗಳಿವೆ ಎಂದು ತಿಳಿದಿದ್ದರೂ ನನಗೆ ಹೊರಬರಲಾಗುತ್ತಿಲ್ಲ. ಇದರಿಂದ ನನಗೆ ದುಃಖವಿಲ್ಲ, ಏಕೆಂದರೆ ನಾನು ಕೆಲಸ ಮಾಡುತ್ತಿರುತ್ತೇನೆ. ಇದನ್ನು ನಾನು ದೊಡ್ಡ ತ್ಯಾಗವೆಂದು ಹೇಳಲಾಗದಿದ್ದರೂ, ಉನ್ನತವಾದುದನ್ನು ಸಾಧಿಸಬೇಕಾದರೆ ಇಷ್ಟವಾದ ಕೆಲವನ್ನು ಬಿಡಬೇಕಾಗುತ್ತದೆ. ನಾನು ಈ ಹಂತವನ್ನು ಪ್ರವೇಶಿಸಿರುವಾಗ, ನನ್ನ ಹತ್ತಿರದಲ್ಲಿರುವ ಕೆಲವರು ಕೂಡಾ ಕೆಲವು ತ್ಯಾಗಗಳನ್ನು ಮಾಡಬೇಕಾಗುತ್ತದೆ. ಅವರು ಮಾಡಬೇಕಾಗಿರುವ ತ್ಯಾಗಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಕೆಲಸದ ಮೇಲಿನ ಪ್ರೀತಿಗಾಗಿ ಮತ್ತು ಋಷಿಗಳ ಮೇಲಿನ ಪ್ರೀತಿಗಾಗಿ ಇದನ್ನು ನೀವು ಸಂತೋಷದಿಂದ ಮಾಡುತ್ತೀರೆಂದು ನನಗೆ ತಿಳಿದಿದೆ.

ನಾವು ಇಲ್ಲಿ ಸೇರಿರುವುದು ಕೇವಲ ಧ್ಯಾನಗಳನ್ನು ಕಲಿಯಲು ಮತ್ತು ಜ್ಞಾನವನ್ನು ಪಡೆಯಲು ಅಲ್ಲ, ಆದರೆ ಒಂದು ಬಹಳ ದೊಡ್ಡ ಉದ್ದೇಶವಿದೆ. ಅದು ಋಷಿಗಳಿಗಾಗಿ ಕೆಲಸ ಮಾಡುವುದು ಮತ್ತು ಇತರರಿಗೆ ಸಹಾಯ ಮಾಡುವುದು. ಈಗ ನಮ್ಮ ಪಾತ್ರವೆಂದರೆ ಯಾವುದೇ ಒತ್ತಾಯ ಮಾಡದೆ ಬೆಳಕಿನಿಂದ ಕ್ರಾಂತಿಯನ್ನು ಮೌನವಾಗಿ ಹರಡುವುದು. ನಾವು ಮೇಣದ ಬತ್ತಿಯಂತೆ. ಮೇಣದ ಬತ್ತಿಯ ಕೆಲಸ ಕೇವಲ ಉರಿಯುವುದು ಮತ್ತು ಬೆಳಕು ಕೊಡುವುದು. ನಾವು ತಿಳಿಯಬೇಕಾದ ಅತ್ಯಂತ ಮುಖ್ಯ ವಿಷಯವೆಂದರೆ 2012ರ ಕೊನೆಯಲ್ಲಿ ಬಹಳ ಬದಲಾವಣೆಗಳು ಆಗುತ್ತವೆ ಎಂಬುದು. ಈ ಬದಲಾವಣೆಗಳ ಜೊತೆಗೂಡಿರುವ ವಿನಾಶವನ್ನು ಆಧ್ಯಾತ್ಮಿಕ ಮಾರ್ಗಗಳಿಂದ ತಪ್ಪಿಸಬಹುದು ಅಥವಾ ಕಡಿಮೆ ಮಾಡಬಹುದು. ಈ ದಿನದಿಂದಲೇ ಮೊದಲ್ಗೊಂಡು ನಮ್ಮ ಕೃತ್ಯಕ್ಕೆ ನಾವೇ ಜವಾಬ್ದಾರಿ ತೆಗೆದುಕೊಳ್ಳೋಣ. ನಿಮ್ಮ ಆತ್ಮಪ್ರಜ್ಞೆಯೊಂದಿಗೆ ಹೇಳಿಕೊಳ್ಳಿ; ಒಪ್ಪಿಕೊಳ್ಳಿ ಮತ್ತು ಬದಲಾಗಿ. ನಾವು ದೂರುವುದನ್ನು ನಿಲ್ಲಿಸುವುದು ಬಹಳ ಮುಖ್ಯ. ಆಯ್ಕೆಗೆ ಮತ್ತು ಬದಲಾವಣೆಗೆ ನಮಗೆ ಹೆಚ್ಚಿನ ಸಹಾಯ ಮತ್ತು ಹೆಚ್ಚಿನ ಪ್ರಚೋದನೆ ಇದೆ. ಬಹಳ ಮುಖ್ಯವಾದ ಒಂದೇ ಒಂದು ರೀತಿ ಎಂದರೆ ಬೆಳಕನ್ನು ಚಾನಲ್ ಮಾಡುವುದು. ನಾವು ಹೊಸ ಕಾಲಚಕ್ರಕ್ಕೆ ಪ್ರವೇಶ ಮಾಡುತ್ತಿದ್ದೇವೆ. ಅದಕ್ಕೆ ಆಧ್ಯಾತ್ಮಿಕ ಸಿದ್ಧತೆ ಅತ್ಯಗತ್ಯ.

ಮೇ 7ರಂದು ಋಷಿಗಳು ಇಡೀ ಮಾನವ ಕುಲಕ್ಕೆ ಒಂದು ಸಂದೇಶವನ್ನು ನನ್ನ ಮೂಲಕ ನೀಡಿದ್ದಾರೆ. ನನಗೆ ಬೆಳಕಿನ ಕಾರ್ಯಕರ್ತರ ಬಗ್ಗೆ ಬಹಳ ಪ್ರೀತಿ ಮತ್ತು ಗೌರವವಿದೆ. ಆದರೆ ಋಷಿಗಳ ಸಂಪರ್ಕಕ್ಕೆ ಬಂದರೆ ಅವರಿಗೆ ಹೆಚ್ಚಿನ ಜ್ಞಾನ ಸಿಗುತ್ತದೆ. ಅವರು ತಮ್ಮ ಜನರಿಗೆ ಹೆಚ್ಚು ಸ್ಪಷ್ಟವಾಗಿ ಮತ್ತು ವಿಶ್ವಾಸದಿಂದ ಮಾರ್ಗದರ್ಶಿಸಬಹುದು.

ಲೈಟ್ ಚಾನಲ್ಸ್ ವಿಶ್ವಸಂಚಲನ 2008, ಮೇ 18ರಂದು ಪ್ರಾರಂಭವಾಯಿತು. 20ಲಕ್ಷ ವಿದ್ಯಾರ್ಥಿಗಳು, ಪರಿಶುದ್ಧ ಆತ್ಮಗಳು ಬೆಳಕನ್ನು ಚಾನಲ್ ಮಾಡಿದ್ದಾರೆ. ಇದನ್ನು ಮುಂದುವರಿಸೋಣ. ನಿಮ್ಮ ಕುಟುಂಬಗಳನ್ನು ಅಲಕ್ಷಿಸಿ ಈ ಕಾರ್ಯವನ್ನು ಮಾಡಬೇಡಿ.

2009 ಮೇ 18ರಂದು 'ರಾ' ಚೈತನ್ಯಗಳನ್ನು ಕೆಳತರಲಾಯಿತು. 'ರಾ' ಲೋಕದ ಜನರು ಮತ್ತು ನಮ್ಮ ಋಷಿಗಳು ಅಪಾರ ಕೆಲಸ ಮಾಡುತ್ತಿದ್ದಾರೆ. ಮೇ 18ರ ರಾತ್ರಿ ಋಷಿಗಳು ನಿಗದಿತ ಪ್ರಮಾಣದಲ್ಲಿ ಈ ಚೈತನ್ಯಗಳನ್ನು ಕೆಲವು ಪ್ರದೇಶಗಳಿಗೆ ಬಿಡುಗಡೆ ಮಾಡಿದ್ದಾರೆ.

ನನ್ನ ಸುತ್ತ ಇರುವ ಜನರಿಗೆ ನಾನು ಜವಾಬ್ದಾರಿಗಳನ್ನು ನಿಯೋಜಿಸುತ್ತಿದ್ದೇನೆ – ಮುಖ್ಯವಾಗಿ ಜಯಂತ್ ಅವರಿಗೆ. ಮೂರು ವರ್ಷಗಳ ಹಿಂದೆ ರಚಿಸಿದ ಸ್ಪಿರಿಚುಯಲ್ ಕೌನ್ಸಿಲ್ ಜೀವಂತವಾಗಿದೆ. ಶ್ಯಾಮಲಾದೇವಿ, ಜಯಂತ್ ಮತ್ತು ಸೋಮಯಾಜಿ ಈ ಸಮಿತಿಯಲ್ಲಿದ್ದಾರೆ. ನಮ್ಮಲ್ಲಿ ಟ್ರಸ್ಟ್ ಇದೆ. ಆಡಳಿತಾತ್ಮಕ ವಿಷಯಗಳನ್ನು ನೋಡಿಕೊಳ್ಳುವ ವಿಶ್ವಾಸಾರ್ಹ ಜನರಿದ್ದಾರೆ.

### 27–05–2012

ಲೈಟ್ ಚಾನಲಿಂಗ್ ಕೆಲಸದಲ್ಲಿ ಕುಟುಂಬದ ಸದಸ್ಯರೊಬ್ಬರು ಒಬ್ಬ ವ್ಯಕ್ತಿಗೆ ವಿರೋಧ ಮಾಡಿದ್ದರು. ಅವರು ಬಹಳ ದುಃಖಿತರಾಗಿದ್ದರು. ಇಂತಹ ಸಮಯಗಳಲ್ಲಿ 'ಲೈಟ್ ಚಾನಲಿಂಗ್ ಕೆಲಸ ಮಾಡುವುದು ಬೇಡ' ಎಂಬುದು ಅವರಿಗೆ ನನ್ನ ಸಲಹೆ. ಈ ಸೃಷ್ಟಿಯಲ್ಲಿ ಋಷಿಗಳು ಅತ್ಯಂತ ವಿವೇಕಿಗಳು. ನಾವು ಯಾವಾಗಲೂ ಸತ್ಯವನ್ನು ಹೇಳಬೇಕು, ಆದರೆ ಕೆಲವು ಸಂದರ್ಭಗಳಲ್ಲಿ ಹೇಳಲಾಗುವುದಿಲ್ಲ. ಅದೇ ವಿವೇಕ. ಪ್ರಪಂಚವನ್ನು ಎದುರು ಹಾಕಿಕೊಳ್ಳುವ ಸಮಯ ಇದಲ್ಲ, ಆದರೆ ಚೈತನ್ಯಗಳೆಲ್ಲವನ್ನು ಸಂಗ್ರಹಿಸಿ ವೈಯಕ್ತಿಕ ಬೆಳವಣಿಗೆಯ ಕಡೆ ಗಮನಕೊಡಬೇಕು. ಕುಟುಂಬದಲ್ಲಿ ಅನಗತ್ಯವಾಗಿ ವಾದ ಮಾಡಿ ಚೈತನ್ಯಗಳನ್ನು ಪೋಲು ಮಾಡಬಾರದು. ನೀವು ಜೀವನವನ್ನು ಬದಲಿಸಿಕೊಂಡು ರಾಜಿ ಮಾಡಿಕೊಳ್ಳಬೇಕಾಗಿಲ್ಲ. ಸಾಧ್ಯವಿದ್ದಷ್ಟು ಅನುಸರಿಸಿಕೊಂಡು ಹೋಗಿ. ಇದು ಋಷಿಗಳಿಂದ ಬಂದಿರುವ ಸ್ಪಷ್ಟಸೂಚನೆ.

ಒಬ್ಬ ವ್ಯಕ್ತಿ ಅಂತರ್ಜಾಲದ ಮೂಲಕ ಒಂದು ರೀತಿ ಚೈತನ್ಯಗೊಳಿಸಿದ ನೀರನ್ನು ಕೊಂಡುಕೊಂಡರು. ಜಾಹೀರಾತು ಚೈತನ್ಯಗೊಳಿಸಿದ ನೀರಿನ ಬಗ್ಗೆ ಅನೇಕ ವಿಷಯಗಳನ್ನು ಹೇಳುತ್ತಿತ್ತು. ಅದು ಆರೋಗ್ಯ ಮತ್ತು ಇತರ ಅನೇಕ ರೀತಿಗಳಲ್ಲಿ ಸಹಾಯ ಮಾಡುತ್ತದೆ. ಅದು ಚಕ್ರಗಳನ್ನು ಚೇತನಗೊಳಿಸುವುದು ಅಥವಾ ಚಾಲನೆಗೊಳಿಸುವುದರಲ್ಲಿ ಸಹಾಯ ಮಾಡುತ್ತದೆ. ಅವರು "ಇದು ನಿಜವೇ?" ಎಂದು ಪ್ರಶ್ನಿಸಿದರು.

ನೀರನ್ನು ಕುಡಿದು ಚಕ್ರಗಳನ್ನು ಚೇತನಗೊಳಿಸಲಾಗುವುದಿಲ್ಲ. ಜನರು ಏನನ್ನಾದರೂ ಮಾರುವ ಸಂದರ್ಭದಲ್ಲಿ ಎಷ್ಟೋ ಹುರುಳಿಲ್ಲದ ವಿಷಯಗಳನ್ನು ಹೇಳುತ್ತಾರೆ. ಸಾಧನೆ ಒಂದು ಪ್ರಯತ್ನ, ಒಂದು ಪ್ರಾಮಾಣಿಕ ಪ್ರಯತ್ನ. ನೀವು ಧ್ಯಾನ ಮಾಡಬೇಕು.

ಮೇ 21 ಸಂಭವಿಸಿದ ಮತ್ತು ಜೂನ್ 4ರಂದು ಸಂಭವಿಸಲಿರುವ ಗ್ರಹಣಗಳ ನಡುವಿನ ಅವಧಿ ಬಹಳ ಮುಖ್ಯವಾದ ಕಾಲ. ಈ ಅವಧಿ ನೀವು ಬದಲಾಗಲು ಆರಿಸಿಕೊಳ್ಳುವ ಕಾಲ. ನೀವು ಒಳ್ಳೆಯ ಮತ್ತು ಸಕಾರಾತ್ಮಕ ವಿಷಯಗಳನ್ನು ಸಾಧಿಸಲು ಮನಸ್ಸು ಮಾಡಿ, ನೀವು ಸಾಧನೆಯಲ್ಲಿ ಯಶಸ್ಸು ಗಳಿಸುವಿರಿ. ಈಗ ಈ ಎಲ್ಲ ಚೈತನ್ಯಗಳು ಕೆಲಸ ಮಾಡುತ್ತಿವೆ. ಅದ್ಭುತ ಬದಲಾವಣೆಗಳು ಸಂಭವಿಸುತ್ತಿವೆ. ಈ ಅವಧಿಯಲ್ಲಿ ಉನ್ನತ ಜಾಗೃತಿಗಳುಂಟಾಗುತ್ತಿವೆ. ಈ ಚೈತನ್ಯಗಳು ಕೆಲಸ ಮಾಡಲು ಅವಕಾಶಮಾಡಿಕೊಟ್ಟರೆ, ನಾವು ವಿಷಯಗಳನ್ನು ಹೆಚ್ಚು ಸ್ಪಷ್ಟವಾಗಿ ಅರಿಯುತ್ತೇವೆ. ನಮ್ಮನ್ನು ತಬ್ಬಿಬ್ಬುಗೊಳಿಸುವ ಮತ್ತು ತಪ್ಪುದಾರಿಗೆಳೆಯುವ ಪ್ರಪಂಚದಿಂದ ತಮ್ಮಷ್ಟಕ್ಕೆ ತಾವೇ ದೂರ ಉಳಿಯುತ್ತೇವೆ, ನಾವು ಸಮಾಧಾನದಿಂದ ಇರುತ್ತೇವೆ. ಇದರರ್ಥ ನಾವು ಎಲ್ಲವನ್ನೂ ಕಡಿದು ಹಾಕಿಕೊಳ್ಳಬೇಕೆಂದೇನೂ ಅಲ್ಲ.

ನಾವು ವಿಷಯಗಳ ಮೌಲ್ಯವರಿತು ಸರಿಯಾದ ಆಯ್ಕೆಗಳನ್ನು ಮಾಡುತ್ತೇವೆ, ಸರಿಯಾದ ಸಂಬಂಧಗಳನ್ನು ಆರಿಸುತ್ತೇವೆ; ಹೆಚ್ಚು ಪ್ರಬುದ್ಧರಾಗುತ್ತೇವೆ, ಮೌನವಾಗುತ್ತೇವೆ, ಗೌರವಾನ್ವಿತರಾಗುತ್ತೇವೆ. ಮಕ್ಕಳಂತಾಗುವುದಕ್ಕೆ, ಮುಗ್ಧರಾಗುವುದಕ್ಕೆ, ಹೆಚ್ಚು ಚೈತನ್ಯಗಳನ್ನು ಪಡೆಯುವುದಕ್ಕೆ ಇದು ಬಹಳ ಒಳ್ಳೆಯ ಅವಧಿ. ಸಾಧ್ಯವಿದ್ದರೆ ಹೆಚ್ಚಾಗಿ ಧ್ಯಾನ ಮಾಡಿ. ನಕಾರಾತ್ಮಕತೆಗಳನ್ನು ಹೋಗಲಾಡಿಸಿ, ನಿಮ್ಮ ಸುತ್ತ ಇರುವ ಬೆಳಕು ಮತ್ತು ದೇವರ ಅರಿವಿನಿಂದಿರಿ. ಕೇವಲ ತೆರೆದುಕೊಳ್ಳಿ, ವಿಶ್ವವೇ ನಿಮ್ಮನ್ನು ಪ್ರವೇಶಿಸುತ್ತದೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

* ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
* ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
* ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
* ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
* ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

* ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
* ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
* ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
* ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
* ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿಯವರಿಗೆ ಬರೆದ ಪತ್ರಗಳ ಆಯ್ದ ಭಾಗಗಳು

(ಸಂ: ಶೋಭಾ ರಾವ್; ಅನು: ಸುಧಾಕರ್)

ಇತ್ತೀಚಿನ ದಿನಗಳ ಧ್ಯಾನದ ಸಮಯದಲ್ಲಿ ನಾನು ಹಿಂದೆ ಮಾಡಿದ ತಪ್ಪುಗಳ ನೆನಪುಗಳು ಒಂದೇ ಸಮನೆ ಮರುಕಳಿಸುತ್ತಿವೆ. ವಿಷಾದಿಸುವಂಥ ಅಥವಾ ತಪ್ಪಿತಸ್ಥ ಭಾವನೆ ಉಂಟುಮಾಡುವ ವಿಷಯಗಳು ನೆನಪಿಗೆ ಬರುತ್ತಿವೆ. ಏಪ್ರಿಲ್ 29ರಂದು, ನಾನು ಹಿಂದೆ ಮಾಡಿದ ತಪ್ಪುಗಳಿಗಾಗಿ ನನ್ನನ್ನು ನಿಂದಿಸಿಕೊಳ್ಳಬೇಕಾಗಿಲ್ಲ ಎಂಬ ವಿವೇಕವನ್ನು ನನಗೆ ಬೆಳಕು ಕೊಟ್ಟಿತು. ನನ್ನನ್ನು ರೂಪಿಸಿದ ಮತ್ತು ನಿಮ್ಮ ಬಳಿಗೆ ಕರೆತಂದ ಹಿಂದಿನ ಎಲ್ಲ ಕ್ಷಣಗಳನ್ನು ಮತ್ತು ಘಟನೆಗಳನ್ನು ನಾನು ಸ್ಮರಿಸುತ್ತೇನೆ. ಹಳೆಯ ಎಲ್ಲ ಕಹಿ ಚೈತನ್ಯಗಳಿಂದ ನಾನು ಮುಕ್ತನಾದಂತೆನ್ನಿಸುತ್ತದೆ.

– ಸಂದೀಪ್ ಬ್ಯಾನರ್ಜಿ

ನನ್ನ ಜೀವನದಲ್ಲಿ ಒಳ್ಳೆಯ ಮತ್ತು ಕೆಟ್ಟ ದಿನಗಳಿದ್ದವು. ಒಳ್ಳೆಯ ದಿನಗಳಲ್ಲಿ, ನನಗೆ ದೇಹವಿಲ್ಲ, ಆದರೆ ಬರೀ ಬೆಳಕಿದೆ ಎನ್ನಿಸುತ್ತಿತ್ತು. ಈಗಲೂ ನಾನು ಪ್ರಶಾಂತತೆ, ಸಂತೋಷ ಮತ್ತು ಶಾಂತಿಯನ್ನು ಅನುಭವಿಸುತ್ತೇನೆ. ನನ್ನ ದುಗುಡತೆ ಮತ್ತು ಕೋಪವನ್ನು ನಿಯಂತ್ರಿಸುವ ಪ್ರಯತ್ನ ಮಾಡುತ್ತೇನೆ ಮತ್ತು ಅದರಿಂದ ಬೇಗ ಹೊರಬರುತ್ತೇನೆ. ನಾನು ನಿರುತ್ಸಾಹಗೊಂಡಾಗ ಬೆಳಕನ್ನು ಹೆಚ್ಚು ಸಂಪರ್ಕಿಸಿ ಸಹಾಯ ಮತ್ತು ಮಾರ್ಗದರ್ಶನವನ್ನು ಕೋರುತ್ತೇನೆ

– ಆ್ಯನ್ ಚಾಪ್‌ಮನ್

ಋಷಿಗಳ ಮಾರ್ಗವನ್ನು ಅನುಸರಿಸಲು ನಾನು ಆಯ್ಕೆ ಮಾಡಿಕೊಂಡಾಗಿನಿಂದ, ಆಧ್ಯಾತ್ಮಿಕ ಜೀವನದ ದಾರಿ ಮತ್ತು ಪ್ರಾಪಂಚಿಕ ದಾರಿಗಳಲ್ಲಿ ಸ್ಪಷ್ಟವಾದ ವ್ಯತ್ಯಾಸಗಳಿವೆ ಎಂಬುದನ್ನು ಗುರುತಿಸಿದ್ದೇನೆ. ಆಧ್ಯಾತ್ಮಿಕ ಜೀವನದಲ್ಲಿ ಉದ್ದೇಶ ಮುಖ್ಯ ಮತ್ತು ಅದು ಫಲಿತಾಂಶದ ನಿರ್ಣಯದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

– ರಾಕೇಶ್ ಮಿಶ್ರ

ಜ್ಞಾನೋದಯವಾಗುವ ಅರ್ಹತೆ ನನಗಿದೆಯೆ ಎಂದು ನಾನು ಆಲೋಚಿಸುತ್ತಿದ್ದೆ. ನಾನು ಒಂದು ಬೆಳಕಿನ ದೇಹ ಎಂಬ ಅನುಭವವಾದ ನಂತರ, ಆ ರೀತಿಯ ಅನುಮಾನ ಬರುವುದು ಅಹಂನಿಂದ ಎಂದು ಈಗ ನನಗೆ ತಿಳಿದಿದೆ. ನಾನು ಆ ಬೆಳಕಿನ ಒಂದು ಭಾಗವಾಗಿರುವುದರಿಂದ ಆ ಬೆಳಕು ನನ್ನನ್ನು ಮನೆಗೆ ಕರೆದೊಯ್ಯುತ್ತದೆ. ನಾನು ಬೆಳಕಿಗೆ ಸ್ಪಂದಿಸಬೇಕು ಅಷ್ಟೆ.

– ಗೀತಾಂಜಲಿ ಬಾಲಕೃಷ್ಣನ್

ನನ್ನ ಅನಾರೋಗ್ಯದ ಕಾರಣಗಳಿಂದ ಧ್ಯಾನಮಾಡುವುದು ತುಂಬ ಕಷ್ಟವಾಗಿತ್ತು, ಆದರೂ ನನಗೆ ಸಾಧ್ಯವಾದಷ್ಟು ಮಾಡಿದ್ದೇನೆ. ಬೆಳಕಿನ ಪ್ರಭಾವವನ್ನು ಕಂಡಿದ್ದೇನೆ. ನಾನು ಸಮಾಧಾನದಿಂದಿದ್ದೆ ಮತ್ತು ಸರಿಯಾದ ಉತ್ತರಗಳು ಸಹಜವಾಗಿಯೇ ನನಗೆ ಬರುತ್ತಿದ್ದವು. ಇದೆಲ್ಲವೂ ಪ್ರತಿದಿನದ ದೀರ್ಘ ಧ್ಯಾನ ಮತ್ತು ಬೆಳಕಿನ ಬಗ್ಗೆ ಒಂದೇ ಸಮನೆ ಯೋಚಿಸಿದ್ದರ ಒಟ್ಟಾರೆ ಪರಿಣಾಮ, ಎಂಬ ಪ್ರಬಲ ಸಂದೇಶವನ್ನು ನಾನು ಪಡೆದೆ. ಸುಂದರವಾದ, ಸರಳವಾದ ಮತ್ತು ಹೆಚ್ಚು ಪರಿಣಾಮಕಾರಿಯಾದ ಧ್ಯಾನವನ್ನು ಕಲಿಸಿಕೊಡುತ್ತಿರುವ ಈ ಮಾರ್ಗಕ್ಕೆ ನಾನು ಕೃತಜ್ಞಳಾಗಿದ್ದೇನೆ.

– ಲಿಂಡಾ ಸಾಯರ್

ಈ ಮಾರ್ಗದ ಧ್ಯಾನದ ಬಗ್ಗೆ ಮಾತನಾಡಲು ಸಾಕಾಗುವಷ್ಟು ಪದಗಳು ನನ್ನಲ್ಲಿಲ್ಲ. ಇದು ಜೀವನದ ಅತ್ಯುನ್ನತ ಮತ್ತು ಅತಿಸೂಕ್ಷ್ಮ ಸಾಹಸ ಕಾರ್ಯ. ಶಾಂತಿ, ಪ್ರೀತಿ, ತೃಪ್ತಿ ಮತ್ತು ಕೃತಜ್ಞತೆಗಳನ್ನು ತಿಳಿದುಕೊಳ್ಳಲು ನನಗೆ ಸಹಾಯಮಾಡಿದ್ದು ಧ್ಯಾನದಲ್ಲಿ ಕಳೆದ ಆ ಕ್ಷಣಗಳು. ಶಂಬಲದ ಎರಡನೆಯ ನಿಯಮ ನನ್ನ ಮೇಲೆ ವಿಶೇಷ ಪರಿಣಾಮ ಬೀರಿದೆ. ಅದು ನನ್ನನ್ನು ಬಂಧಮುಕ್ತಳನ್ನಾಗಿಸಿದೆ. ನಿಮಗೆ ಮತ್ತು ಕರುಣಾಳು ಋಷಿಗಳಿಗೆ ನನ್ನ ವಂದನೆಗಳು.

– ನಂದಿತ ವಿಜಯನ್

ನನ್ನ ದಿನನಿತ್ಯದ ಜೀವನದಲ್ಲಿ ದೇವರ, ಋಷಿಗಳ ಹಾಗೂ ಗುರೂಜಿಯವರ ಕೃಪೆ ಮತ್ತು ಪ್ರೀತಿಯನ್ನು ಗುರುತಿಸಿ, ಅನುಭವಿಸಲು ಸಾಧ್ಯವಾಗಿದೆ. ಪ್ರತಿದಿನದ ದೇವರ ಕೊಡುಗೆಗಳಿಗಾಗಿ ನನ್ನ ಹೃದಯಾಂತರಾಳದಿಂದ ಕೃತಜ್ಞತೆಯನ್ನು ನಾನು ಹೇಳಬಲ್ಲವನಾದರೆ, ಅದಕ್ಕಿಂತ ಹೆಚ್ಚಿನದನ್ನು ನಾನು ಕೇಳುವುದಿಲ್ಲ... ಮೌನದಲ್ಲಿ ಮೂಡಿದ ಕೆಲವೇ ಕ್ಷಣಗಳ ಕೃತಜ್ಞತಾಭಾವನೆ ನನ್ನೊಳಗೆ ಅಪಾರವಾದ ಬದಲಾವಣೆಯನ್ನು ತಂದಿದೆ. ನಾನು ಸಂತೋಷದಿಂದಿದ್ದೇನೆ. ನನಗೆ ಸಹಾಯಮಾಡಿದ ಎಲ್ಲರಿಗೂ ವಂದಿಸುತ್ತೇನೆ.

– ಆಶೀಷ್ ದೇಸಾಯಿ

ಯಾವುದೇ ಸಂವಾದದ ಸಮಯದಲ್ಲೂ, ಯಾವುದೇ ಪ್ರಶ್ನೆಗೆ ಪ್ರತಿಕ್ರಿಯಿಸುವ ಮೊದಲು ಸ್ವಲ್ಪ ನಿಧಾನಿಸುತ್ತೇನೆ. ಅಹಿತಕರ ಸಂದರ್ಭಗಳಲ್ಲಿ ನಕಾರಾತ್ಮಕವಾಗಿ ನಾನು ಪ್ರತಿಕ್ರಿಯಿಸುವುದನ್ನು ಯಾವುದೋ ಶಕ್ತಿ ತಡೆಯುತ್ತದೆ. ಮುಂಚೆ ನಾನು ತಪ್ಪಾಗಿ ಪ್ರತಿಕ್ರಿಯಿಸುತ್ತಿದ್ದೆ ಮತ್ತು ನಂತರ ವಿಷಾದಿಸುತ್ತಿದ್ದೆ. ಈಗ ಬಹುತೇಕ ನನ್ನ ಸಂಪರ್ಕ ಸಮಾನ ಮನಸ್ಕರೊಡನೆ ಮತ್ತು ಸಕಾರಾತ್ಮಕ ಜನರೊಂದಿಗೆ ಆಗುತ್ತಿರುವುದನ್ನು ಗಮನಿಸಿದ್ದೇನೆ. ನಿರ್ಧಾರ ತೆಗೆದುಕೊಳ್ಳುವ ಶಕ್ತಿ ನನ್ನಲ್ಲಿ ಹೆಚ್ಚಾಗಿದೆ ಮತ್ತು ಆ ನಿರ್ಧಾರಗಳು ಉತ್ತಮ ಫಲಿತಾಂಶಗಳನ್ನು ತಂದುಕೊಡುತ್ತಿವೆ. ಇದರಿಂದಾಗಿ ನನ್ನ ಆತ್ಮವಿಶ್ವಾಸ ಹೆಚ್ಚಾಗುತ್ತಿದೆ.

– ಪ್ರವೀಣ್ ಸುಕಲ

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ನಮ್ಮ ಆಲೋಚನೆಗಳ ಮತ್ತು ಭಾವನೆಗಳ ಕಂಪನಗಳನ್ನು ನಾವು ಹೆಚ್ಚಿಸುವುದು ಹೇಗೆ?**

ಉ: ಅದಕ್ಕಾಗಿ ಯಾವುದೇ ತಂತ್ರಗಳ ಬಗ್ಗೆ ಯೋಚಿಸಬೇಡಿ. ಪ್ರೀತಿಯನ್ನು ಅಭಿವ್ಯಕ್ತಿಸಿ, ಅನುಭವಿಸಿ. ಕಂಪನಗಳು ತಾನಾಗಿಯೇ ಹೆಚ್ಚುತ್ತವೆ.

**ಪ್ರ: ದೇವರು ನನ್ನನ್ನು ಎಷ್ಟು ಪ್ರೀತಿಸುತ್ತಾನೆ?**

ಉ: ನೀವು ದೇವರನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ಅವನು ನಿಮ್ಮನ್ನು ಪ್ರೀತಿಸುತ್ತಾನೆ. ದೇವರ ಪ್ರೀತಿಯ ಆಯಾಮವನ್ನು ನಾವು ತಿಳಿದಿಲ್ಲ.

**ಪ್ರ: ನನ್ನ ವರ್ತನೆ ಸರಿಯಾಗಿಲ್ಲ. ಆಗಲೂ ದೇವರು ನನ್ನನ್ನು ಪ್ರೀತಿಸುತ್ತಾನೆಯೇ?**

ಉ: ನೀವು ಹೇಗಿದ್ದೀರೋ ಹಾಗೇ ಮತ್ತು ನಿಮ್ಮ ವರ್ತನೆ ಯಾವುದೇ ರೀತಿಯಲ್ಲಿದ್ದರೂ ದೇವರು ನಿಮ್ಮನ್ನು ಪ್ರೀತಿಸುತ್ತಾನೆ.

**ಪ್ರ: ಬೆಳಕಿನ ಸಾಗರದಲ್ಲಿ ಮುಳುಗುವುದು 'ಆತ್ಮ ಸ್ನಾನವೇ'?**

ಉ: ಇದು ಅದಕ್ಕಿಂತಲೂ ಹೆಚ್ಚಿನದ್ದಾಗಿದೆ. ಪ್ರತಿಯೊಂದು ಸಲವೂ ಇಂಥ ಆತ್ಮ ಸ್ನಾನವನ್ನು ಮಾಡಿದಾಗ ನಾವು ಪುನರ್ಜನ್ಮ ಪಡೆಯುತ್ತೇವೆ, ಆಧ್ಯಾತ್ಮಿಕವಾಗಿ ಹೊಸಬರಾಗುತ್ತೇವೆ. ಅದು ಅಜ್ಞಾನದ ಒಂದು ಪದರವನ್ನು ಕಳಚಿದಂತೆ, ನಕಾರಾತ್ಮಕದ ಪದರವನ್ನು ಕಳಚಿದಂತೆ ಮತ್ತು ನಾವು ಶುದ್ಧತೆ ಹಾಗೂ ತಾಜಾತನವನ್ನು ಹೊಂದಿದಂತೆ. ಅದು ಕರ್ಮಗಳಿಂದ ಮುಕ್ತಗೊಳಿಸುತ್ತದೆ, ಶುದ್ಧೀಕರಣದ ಕಾರ್ಯ ಸ್ವಾಭಾವಿಕವಾಗಿ ನಡೆಯುತ್ತದೆ. ನಮ್ಮಲ್ಲಿರುವ ಸಾಮರ್ಥ್ಯಗಳು ತೆರೆದುಕೊಳ್ಳುತ್ತವೆ. ಹೊಸ ಅರಿವುಂಟಾಗುತ್ತದೆ, ಹೊಸ ಜ್ಞಾನ ಮತ್ತು ಹೊಸ ಚೈತನ್ಯಗಳು ಬರುತ್ತವೆ. ನಾವು ದೇವರನ್ನು ಉನ್ನತ ಸಮಾಧಿಯಲ್ಲಿ ಅನುಭವಿಸುತ್ತೇವೆ.

**ಪ್ರ: ಆತ್ಮವು ಜೀವಮಾನಗಳ ನಡುವೆ ವಿಶ್ರಾಂತಿ ಪಡೆಯುವ ಜಾಗ ಈ ಬೆಳಕಿನ ಸಾಗರವೇ?**

ಉ: ಇಲ್ಲ. ನಾವು ದೇಹವನ್ನು ತ್ಯಜಿಸಿದ ಮೇಲೆ ನಮ್ಮನ್ನು ಬೇರೆ ಲೋಕಕ್ಕೆ ಕರೆದೊಯ್ಯಲಾಗುತ್ತದೆ, ಅಲ್ಲಿ ನಾವು ವಿಶ್ರಮಿಸುತ್ತೇವೆ ಮತ್ತು ನಮಗೆ ಉಪಯುಕ್ತ ಎಂದೆನಿಸಿದಂತೆ ಸಮಯವನ್ನು ಕಳೆಯುತ್ತೇವೆ – ನಾವು ಧ್ಯಾನ ಮಾಡಬಹುದು, ಆನಂದಿಸಬಹುದು, ವಿಶ್ರಮಿಸಬಹುದು. ನಾವು ಕಾಯುತ್ತಿರುತ್ತೇವೆ.

**ಪ್ರ: ಬೆಳಕಿನ ಸಾಗರದಲ್ಲಿ ನಾವು ಬೇರೆ ಆತ್ಮಗಳೊಂದಿಗೆ ಮಾತನಾಡಿದಾಗ, ಅವುಗಳಿಗೆ ಅಂತರ್‌ಗ್ರಹಣ ಶಕ್ತಿಯಿಂದಾಗಿ ಈ ಸಂಭಾಷಣೆಯು ತಿಳಿದಿರುತ್ತದೆಯೇ? ಅವರಿಗೆ ಅದರ ವಿವರಗಳ ಅರಿವಿರುತ್ತದೆಯೇ?**

ಉ: ಅವರಿಗೆ ಆಳವಾದ ಮಟ್ಟದಲ್ಲಿ ಅದು ತಿಳಿಯುತ್ತದೆ. ಯಾವಾಗಲೂ ಈ ಮಟ್ಟದಲ್ಲಿ ಅಲ್ಲ. ಅವರಿಗೆ ಕೆಲವೊಮ್ಮೆ ಅದರ ವಿಷಯಗಳ ಅರಿವಿರುತ್ತದೆ. ಅದು ವ್ಯಕ್ತಿಯ ಗ್ರಹಣಶಕ್ತಿ ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಅದು ಸಂಭಾಷಣೆಯ ವಿಷಯವನ್ನು ಕೂಡ ಅವಲಂಬಿಸಿರುತ್ತದೆ. ಕೆಲವೊಮ್ಮೆ ನಾವು ಆಳವಾದ ಮಟ್ಟದಲ್ಲೂ ಕೂಡಾ ತಿಳಿಯಬಾರದು.

**ಪ್ರ: ಬೆಳಕಿನ ಕಾರ್ಯಕರ್ತ ಯಾರು?**

ಉ: ಬೆಳಕನ್ನು ಅರ್ಥಮಾಡಿಕೊಂಡಿರುವವನು, ಬೆಳಕನ್ನು ಅನುಭವಿಸುವವನು ಮತ್ತು ಬೆಳಕನ್ನು ಹರಡುವವನು ಬೆಳಕಿನ ಕಾರ್ಯಕರ್ತ. ಬೆಳಕಿನ ಕಾರ್ಯಕರ್ತರು ಕಾಲಕ್ಕನುಸಾರವಾಗಿ ಒಂದು ಸಾಮಾನ್ಯ ಯೋಜನೆಗಾಗಿ ಕೆಲಸ ಮಾಡುತ್ತಾರೆ. ಈಗಿನ ಸಮಯದಲ್ಲಿ ಇದು ಜನರು ಪರಿವರ್ತನೆ ಹೊಂದಲು ಸಹಾಯ ಮಾಡುವುದಾಗಿದೆ. ನಾವು ಹೊಸಯುಗದ ಮತ್ತು ಸಮೀಪಿಸುತ್ತಿರುವ 2012ರ ಘಟನೆಗಳ ಬಗೆಗಿನ ಜ್ಞಾನವನ್ನು ಜನರಿಗೆ ಒದಗಿಸಬೇಕು. ಬಹಳ ಮುಖ್ಯವಾದ ವಿಷಯವೆಂದರೆ ನಾವು ಆಧ್ಯಾತ್ಮಿಕವಾಗಿ ಪರಿವರ್ತನೆಗೊಳ್ಳಬೇಕು.

**ಪ್ರ: ಬೆಳಕನ್ನು ಆರಿಸಿಕೊಳ್ಳುವುದು ಏಕೆ ಅಷ್ಟೊಂದು ಕಷ್ಟವಾಗಿದೆ?**

ಉ: ಅದು ಕಷ್ಟವೇನಲ್ಲ. ನಾವು ಬೆಳಕನ್ನು ಆರಿಸಿಕೊಳ್ಳಲು ಬಯಸುವುದಿಲ್ಲ. ನಾವು ಬೆಳಕನ್ನು ಬುದ್ಧಿಯ ಮಟ್ಟದಲ್ಲಿ ಆರಿಸಿಕೊಳ್ಳುತ್ತೇವೆ ಮತ್ತು ಒಪ್ಪಿಕೊಳ್ಳುತ್ತೇವೆ. ಆದರೆ ಆತ್ಮದ ಮಟ್ಟದಲ್ಲಿ ಆಯ್ಕೆಯನ್ನು ಮಾಡಿಕೊಳ್ಳದಿದ್ದರೆ, ನಾವು ಎಲ್ಲಾ ತರಹದ ಕಷ್ಟಗಳನ್ನು ಕಾಣುತ್ತೇವೆ. ಇದು ಸತ್ಯ.

**ಪ್ರ: ಒಬ್ಬ ವ್ಯಕ್ತಿಗೆ ನಾವು ಬೆಳಕನ್ನು ಕಳುಹಿಸಿದರೆ ಆತ ಅದನ್ನು ಗ್ರಹಿಸುತ್ತಾನೆಯೇ?**

ಉ: ಈ ಮಟ್ಟದಲ್ಲಿ ಆತ ಅದನ್ನು ಪ್ರತಿಬಾರಿಯೂ ಗ್ರಹಿಸಲಾರ. ಆದರೆ ಬೇರೆ ಮಟ್ಟದಲ್ಲಿ ಅವನಿಗೆ ಅದರ ಅರಿವಿರುತ್ತದೆ.

**ಪ್ರ: ನಾನು ನನ್ನ ಕೊಠಡಿಯ ಮೇಲೆ ಪಿರಮಿಡ್ ಕಟ್ಟಬೇಕೆಂದಿದ್ದೇನೆ. ಆದರೆ ಒಳ್ಳೆಯ ಧ್ಯಾನಕ್ಕೆ ಅದರ ಅವಶ್ಯಕತೆ ಇದೆಯೇ?**

ಉ: ಅದರ ಅವಶ್ಯಕತೆ ಇಲ್ಲ. ನೀವು ಪಿರಮಿಡ್ ಒಳಗೆ ಕುಳಿತುಕೊಂಡಿದ್ದೀರೆಂದು ಭಾವಿಸಿ ಮತ್ತು ಧ್ಯಾನ ಮಾಡಿ, ನಿಮಗೆ ಭೌತಿಕ ಪಿರಮಿಡ್ ಒಳಗೆ ಕುಳಿತಾಗ ಸಿಗುವ ಎಲ್ಲಾ ಪರಿಣಾಮ ಮತ್ತು ಲಾಭಗಳು ಸಿಗುತ್ತವೆ.

**ಪ್ರ: ಧ್ಯಾನ ಮಾಡುತ್ತಿರುವಾಗ ನನಗೆ ನಾನು ಬೆಳೆಯುತ್ತಿರುವಂತೆ ಮತ್ತು ಎಲ್ಲೆಡೆ ಇರುವಂತೆ ಅನಿಸುತ್ತದೆ. ಇದು ಸಮಾಧಿಯೇ ಅಥವಾ ನನ್ನ ಮನಸ್ಸಿನ ಊಹೆಯೇ?**

ಉ: ಇದು ಖಂಡಿತವಾಗಿಯೂ ಮನಸ್ಸಿನ ಊಹೆಯಲ್ಲ. ಇದು ಒಂದು ಉನ್ನತ ಮತ್ತು ಅಪರೂಪದ ಅನುಭವ. ಇದು ಸಮಾಧಿಯ ಆರಂಭ, ಸಮಾಧಿಯ ಒಂದು ಭಾಗ.


**ಪ್ರ: ನಾವು ಪ್ರಾಣದಿಂದ ಬದುಕುವುದನ್ನು ಅಭ್ಯಾಸ ಮಾಡಬೇಕೇ?**

ಉ: ಈಗ ಅದರ ಅವಶ್ಯಕತೆ ಇಲ್ಲ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| 2012 - End or Beginning | 100/- |
| Preparing for 2012 | 100/- |
| Light Body & Other Realities | 75/- |
| Master-Pupil Talks | 60/- |
| iGuruji - Vol 1, 3 & 4 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I & II | each 200/- |
| Guruji Speaks Vol - 3 | 150/- |
| Guruji Speaks Vol - 4 & 5 | each 200/- |
| The Book of Reflections - Vol 1 & 2 | each 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8



**ಗುರೂಜಿ ಕೃಷ್ಣಾನಂದ (1939)**

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ)

2–3–2012 ರಂದು ರಾತ್ರಿ, ಒಂದು ದೊಡ್ಡ ಸಭಾಂಗಣದಲ್ಲಿ ಸಂಪೂರ್ಣ ಮಾನಸ ಕುಟುಂಬ ಹಾಗೂ ಇನ್ನೂ ಅನೇಕ ಜನರು ಸೇರಿದ್ದಂತೆ ಒಂದು ಕನಸು ಕಂಡೆ. ಅಲ್ಲಿ ವೇದಿಕೆಯ ಮಧ್ಯೆ ಗುರೂಜಿಯವರು ಕುಳಿತುಕೊಂಡು ಹಲವು ವ್ಯಕ್ತಿಗಳೊಂದಿಗೆ ಏನನ್ನೋ ಚರ್ಚಿಸುತ್ತಿದ್ದರು. ನಮ್ಮ ಕಾರ್ಯಕರ್ತರು ಕಾರ್ಯಕ್ರಮವೊಂದಕ್ಕೆ ಸಿದ್ಧತೆಗಳನ್ನು ನಡೆಸುತ್ತಿದ್ದರು. ಗುರೂಜಿಯವರು ಸಭೆಯನ್ನು ಆರಂಭಿಸುವ ಮೊದಲು, ನಾವೊಂದು ಚರ್ಚ್‌ನಲ್ಲಿ ಕುಳಿತು ಜೀಸಸ್ ಕ್ರೈಸ್ಟ್‌ರನ್ನು ಪ್ರಾರ್ಥಿಸುತ್ತಿದ್ದಂತೆ ನನಗನಿಸಿತು. ನಾನು ಎಚ್ಚರಗೊಂಡಾಗ, ಅತ್ಯಂತ ಪ್ರೀತಿ ಮತ್ತು ಪ್ರಶಾಂತತೆಯನ್ನು ಅನುಭವಿಸುತ್ತಿದ್ದೆ. ನಂತರ, ಗುರೂಜಿಯವರು ನಾನು ಕಂಡದ್ದು ಮೇ 7ರಂದು ನಡೆಯಲಿರುವ 'ಲೈಟ್ ಚಾನಲ್ಸ್ ಸಮಾವೇಶ'ದ ವಿಷನ್ ಎಂದು ತಿಳಿಸಿದರು.

– ಕಮಲ್ ಡಿ.

ಬೇಸಿಗೆಕಾಲದಲ್ಲಿ ನಮ್ಮ ಪಕ್ಕದ ಖಾಲಿ ಜಾಗದಿಂದ ಬರುವ ಸೊಳ್ಳೆಗಳ ಕಾಟದಿಂದ ನಾವು ತಪ್ಪಿಸಿಕೊಳ್ಳಲಾಗುವುದಿಲ್ಲ. ಒಂದು ದಿನ ಬೆಳಿಗ್ಗೆ ನಾನು ಧ್ಯಾನ ಮಾಡಲು ಕುಳಿತಾಗ ಸೊಳ್ಳೆಗಳು ನನ್ನ ಕಿವಿಯ ಸುತ್ತಾ ಗುಯ್‌ಗುಡಲು ಮತ್ತು ನನಗೆ ಕಚ್ಚಲು ಆರಂಭಿಸಿದವು. ಕೆಲವು ನಿಮಿಷಗಳ ನಂತರ ನನಗೆ ಅದನ್ನು ತಡೆಯಲು ಸಾಧ್ಯವಾಗದೆ, ಅವುಗಳನ್ನು 'ದಯವಿಟ್ಟು ನನ್ನನ್ನು ಧ್ಯಾನಮಾಡಲು ಬಿಡಿ, ಒಂದು ಗಂಟೆಯ ನಂತರ ನಾನು ಸಂಪೂರ್ಣವಾಗಿ ನಿಮಗಾಗಿಯೇ,'ಎಂದು ಕೇಳಿಕೊಂಡೆ. ಆಗ ಅವೆಲ್ಲ ಹೊರಹೋದವು! ಮತ್ತು ನನಗೆ ಚೆನ್ನಾಗಿ ಧ್ಯಾನ ಮಾಡಲು ಸಾಧ್ಯವಾಯಿತು.

– ರಾಣಿ ಸಾವ್‌ಡೆ

ನನ್ನ ಮಗನ 8ನೇ ವರ್ಷದ ಪುಣ್ಯತಿಥಿಯಂದು ನಾನು ಸಂಪೂರ್ಣ ನಿಶ್ಚಲತೆಯಲ್ಲಿ ಕಳೆಯಲು ನಿರ್ಧರಿಸಿ, ಬೆಳಕನ್ನು ಪ್ರಾರ್ಥಿಸಿದೆ. ತಕ್ಷಣ ನಾನು ಶಾಂತತೆ ಮತ್ತು ನಿಶ್ಶಬ್ದದಿಂದ ಕೂಡಿದ ಆಳವಾದ ಧ್ಯಾನಸ್ಥಿತಿಯನ್ನು ತಲುಪಿದೆ. ಪುಣ್ಯತಿಥಿ ಕಾರ್ಯಕ್ರಮದ ಕೊನೆಯಲ್ಲಿ, ನಾನು ಒಂದು ದಿವ್ಯಾಗ್ನಿಯೆಡೆಗೆ ನಡೆದು ಪೂಜ್ಯಭಾವನೆಯಿಂದ ನಮಸ್ಕರಿಸುತ್ತಿರುವುದನ್ನು ಕಂಡೆ. ನಂತರ, ನಾನು ಬಂದಿರುವವರೆಲ್ಲರೂ ಹೋದ ಬಳಿಕವೂ ಬಹಳ ಸಮಯದವರೆಗೆ ಧ್ಯಾನ ಮಾಡುತ್ತಿದ್ದೆ ಮತ್ತು ಕುಳಿತ ಜಾಗದಿಂದ ಎದ್ದೇ ಇಲ್ಲ ಎಂದು ನನಗೆ ತಿಳಿಯಿತು! ಈ ಎಲ್ಲಾ ಪ್ರಕ್ರಿಯೆಗಳು ಬೇರೆ ಮಟ್ಟದಲ್ಲಿ ನಡೆಯುತ್ತಿತ್ತು ಎಂದು ನನಗರಿವಾಯಿತು ಮತ್ತು ಈ ಎಲ್ಲಾ ಅನುಭವ ನನಗೆ ಸಂಪೂರ್ಣವಾಗಿ ಹೊಸದಾದ ಒಂದು ಆಯಾಮವನ್ನು ತೆರೆಯಿತು.

– ಫಿರೋಜ಼ಾ ಪಾಂಡೆ

ನಾನು ವ್ಯವಸಾಯ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ತರಗತಿಗಳನ್ನು ನಡೆಸುತ್ತೇನೆ. ಜುಲೈ 2011 ಮತ್ತು ಡಿಸೆಂಬರ್ 2011 ರ ವಿಶ್ವವಿದ್ಯಾಲಯ ಪರೀಕ್ಷೆಗಳ ಸಂದರ್ಭದಲ್ಲಿ ನನ್ನ ವಿದ್ಯಾರ್ಥಿಗಳಿಗೆ, ಹೆಚ್ಚಿನ ಅಂಕಗಳನ್ನು ಪಡೆದು ತೇರ್ಗಡೆಯಾಗಬೇಕೆಂಬ ಬಲವಾದ ಆಶಯದೊಂದಿಗೆ, ಪರೀಕ್ಷೆ ಬರೆಯುವ ಮೊದಲು 3 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಲು ತಿಳಿಸಿದೆ. ಎರಡು ಬಾರಿಯೂ ಅದು ಕೆಲಸ ಮಾಡಿತು. ಎಲ್ಲಾ ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ಪರೀಕ್ಷೆಯಲ್ಲಿ ತೇರ್ಗಡೆಯಾದರು.

– ಸ್ವಾಮಿನಾಥನ್

ನಾನು ರಿಪೇರಿಯಾಗುತ್ತಿದ್ದ ನನ್ನ ಕಾರಿನ ಬಳಿ ನಿಂತಿದ್ದೆ. ಆಲದ ಮರದ ಎಲೆಯೊಂದು ಕಾರಿನೊಳಗೆ ಬಿತ್ತು. ನಾನು ಎಲೆಯನ್ನು ನೋಡಿದೆ ಮತ್ತೆ ಮರದೆಡೆಗೆ ದೃಷ್ಟಿ ಹರಿಸಿದೆ. ಆಗ ಮರ ಹಾಗೂ ನನ್ನ ನಡುವೆ ಸಂಪರ್ಕ ಏರ್ಪಟ್ಟಿತು. ಮರ ನನ್ನೊಡನೆ ಪ್ರತಿಸ್ಪಂದಿಸಿತು. ನಾನು ಮರದೊಂದಿಗೆ ಏಕತೆಯನ್ನು ಅನುಭವಿಸಿದೆ. ಕ್ಷಣಾರ್ಧದಲ್ಲಿ ಮರ, ಭಗವಂತ ಹಾಗೂ ಎಲ್ಲದರೊಂದಿಗೆ ನಾನು ಸಂಪರ್ಕ ಹೊಂದಿದಂತೆ ಅನಿಸಿತು. ನನ್ನ ಸುತ್ತಲೂ ದೇವರನ್ನು ಅನುಭವಿಸಿದೆ.

– ಸುನಿಲ್ ಬಿಸರಹಳ್ಳಿ

ನಾನು ನನ್ನ ಪತಿಯೊಡನೆ ಹೊರಹೊರಟಾಗ, ನನ್ನ ಮೊಬೈಲ್‌ಗೆ ಕರೆನ್ಸಿ ಹಾಕಿಸಬೇಕೆಂದು ಯೋಚಿಸುತ್ತಿದ್ದೆ. ಆದರೆ ಆಗ ಅದು ಸಾಧ್ಯವಿಲ್ಲವೆಂದು ಸುಮ್ಮನಾದೆ. ಸ್ವಲ್ಪ ಸಮಯದ ನಂತರ ನನ್ನ ಮೊಬೈಲ್‌ಗೆ 100 ರೂಪಾಯಿಗಳ ಕರೆನ್ಸಿ ಹಾಕಿರುವುದಾಗಿ ಸಂದೇಶ ಬಂದಾಗ ನನಗೆ ಬಹಳ ಆಶ್ಚರ್ಯವಾಯಿತು! ನನ್ನ ಈ ಆಲೋಚನೆಯ ಬಗ್ಗೆ ಬೇರೆಯಾರಿಗೂ ತಿಳಿದಿರದ ಕಾರಣ ಯಾರು ಹಾಗೆ ಮಾಡಿದರೆಂದು ನನಗೆ ಗೊತ್ತಿಲ್ಲ. ನನ್ನ ಪ್ರತಿಯೊಂದು ವ್ಯವಹಾರಗಳನ್ನು ಗಮನಿಸಿ ಸಹಾಯ ಮಾಡಿದುದಕ್ಕಾಗಿ ನಾನು ಋಷಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದೊಂದು ನಂಬಲಸಾಧ್ಯವಾದ ಘಟನೆ!

– ನಂದಿತಾ ಪಟೇಲ್

ಇತ್ತೀಚೆಗೆ ನಾವು ಚಿಕ್ಕ ಮಗುವಿದ್ದ ಕುಟುಂಬವನ್ನು ಭೇಟಿ ಮಾಡಿದೆವು. ಮಗು ಮಂಚದ ಮೇಲೆ ಆಡುತ್ತಿತ್ತು. ನಾವು ಮಾತನಾಡುತ್ತಾ ನಮ್ಮ ಮಾತುಗಳು ಯುಗಗಳ ಕಡೆಗೆ ತಿರುಗಿತು. ನಾನು, ಈಗ ನಾವು ಸತ್ಯಯುಗದ ಕಡೆಗೆ ನಡೆಯುತ್ತಿದ್ದೇವೆಂದು ಹೇಳಿದೆ. ಪ್ರತಿಸಲ ನಾನು ಈ ರೀತಿಯ ವಿಷಯವನ್ನು ಹೇಳಿದಾಗ, ಆ ಮಗು ಆಟ ಆಡುವುದನ್ನು ನಿಲ್ಲಿಸಿ ನನ್ನೆಡೆಗೆ ನೋಡಿ ನಗುತ್ತಿತ್ತು. ಮೊದ ಮೊದಲು ಇದು ನನ್ನ ಭ್ರಮೆ ಎಂದೆನಿಸಿದರೂ, ಪ್ರತಿಸಲ ನಾನು ಸತ್ಯಯುಗದ ಬಗ್ಗೆ ಮಾತನಾಡಿದಾಗಲೆಲ್ಲಾ ಆ ಮಗು ನಗುತ್ತಿತ್ತು!

– ಜಸ್‌ಪ್ರೀತ್ ಕೌರ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ|| ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ